ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 8 ಫೆಬ್ರವರಿ 23, 1986 ಬೆಲೆ 60 ಪೈಸೆ

14 ವಿರೋಧ ಪಕ್ಷಗಳ ಸಮರಶೀಲ ಕರೆ

ಫೆ. 26 ರಂದು 'ಭಾರತ ಬಂದ್'

ಈಗಾಗಲೇ ನಿರುದ್ಯೋಗ, ಬರಗಾಲ, ಹೆಚ್ಚಿನ ತೆರಿಗೆಗಳಿಂದಾಗಿ ತತ್ತರಿಸುತ್ತಿರುವ ಜನಸಾಮಾನ್ಯರ ಮೇಲೆ ರಾಜೀವ ಗಾಂಧಿ ಸರಕಾರ ಅತಿ ಭಾರವಾದ ಹೊಸ ಹೊರೆಯನ್ನು ಹೇರಿದೆ. ಜನರ ಅತ್ಯಾವಶ್ಯಕ ವಸ್ತುಗಳಾದ ಅಕ್ಕಿ, ಗೋಧಿ, ಪಾಮ್ ಎಣ್ಣೆ, ಸಕ್ಕರೆ, ಕಲ್ಲಿದ್ದಲುಗಳ ಬೆಲೆ ಹೆಚ್ಚಳದಿಂದ ಸಮಾಧಾನ ಹೊಂದದ ಕೇಂದ್ರ ಸರಕಾರ ಪೆಟ್ರೋಲಿಯಂ, ಸೀಮೆಎಣ್ಣೆ, ರಸಗೊಬ್ಬರ, ಅಡಿಗೆ ಅನಿಲಗಳ ಮೇಲೂ ಅತಿ ಹೆಚ್ಚಿನ ಬೆಲೆ ಏರಿಸಿದೆ. ಲೋಕ ಸಭೆಯ ಬಜೆಟ್ ಅಧಿವೇಶನ ಸೇರಲು 19 ದಿವಸದೊಳಗಾಗಿಯೇ ಸುಗ್ರೀವಾಜ್ಞೆಯ ಮೂಲಕ ಬೆಲೆ ಹೆಚ್ಚಿಸಲಾಗಿದೆ.

ಲೋಕ ಸಭೆಯನ್ನು ಕಡೆಗಣಿಸಿ, ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ದಿಢೀರನೆ ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಫೆಬ್ರವರಿ 26 ರಂದು ಭಾರತ ಬಂದ್ ಆಚರಿಸಬೇಕೆಂದು ವಿರೋಧ ಪಕ್ಷಗಳು ನಿರ್ಧರಿಸಿವೆ. ಈ ಚಾರಿತ್ರಿಕ ನಿರ್ಣಯಕ್ಕೆ ಬೆಂಬಲ ನೀಡಿ ಅದನ್ನು ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದೇಶದ ಜನತೆಗೆ ಕರೆ ಕೊಟ್ಟಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳೂ ರಾಷ್ಟ್ರೀಯ ಚಳುವಳಿ ಸಮಿತಿಯಲ್ಲಿರುವ ಸ್ವತಂತ್ರ ಸಂಘಟನೆಗಳೂ ಈ ಬಂದ್‌ನ್ನು ಯಶಸ್ವಿಗೊಳಿಸಲು ಕರೆ ಕೊಟ್ಟಿವೆ.

ದೇಶಾದ್ಯಂತ ಸಾರ್ವತ್ರಿಕ ಮುಷ್ಕರ ರಾಜ್ಯಗಳಲ್ಲಿ ಬಂದ್‌ಗಾಗಿ ವಿರೋಧ ಪಕ್ಷಗಳ ಹಲವಾರು ಸಲ ಕರೆ ನೀಡಿವೆ. ಆದರೆ ಭಾರತ ಬಂದ್‌ಗೆ ಕರೆ ನೀಡಿರುವುದು ಇದು ಪ್ರಥಮ ಸಲ.

ಲೋಕ ಸಭೆಯಲ್ಲಿ ಅತ್ಯಂತ ಹೆಚ್ಚು ಬೆಂಬಲ ಪಡೆದು ಅಧಿಕಾರಕ್ಕೆ ಬಂದ ಒಂದು ವರ್ಷದೊಳಗಾಗಿಯೇ ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ಈ ರೀತಿ ಹೆಚ್ಚಿಸಿ, "ದೇಶದ ದೀರ್ಘಾವಧಿ ಹಿತ ದೃಷ್ಟಿಯಿಂದ ಕೆಲವು ಅತಿ ಗಡುಸಾದ ನಿರ್ಧಾರ ಕೈಗೊಳ್ಳಬೇಕಾಗುತ್ತದೆಂದು" ಹೇಳಿ ತನ್ನ ಜನವಿರೋಧಿ ಕೃತಿಯನ್ನು ರಾಜೀವ ಗಾಂಧಿ ಸಮರ್ಥಿಸಿಕೊಂಡಿರುವುದು ಅತ್ಯಂತ ನಾಚಿಕೆಗೇಡಿನ ಕ್ರಮ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸತತವಾಗಿ ಹೇಳುತ್ತಾ ಬಂದಂತೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕಿನ ಆದೇಶದಂತೆ ತನ್ನ ಆರ್ಥಿಕ ನೀತಿಯನ್ನು ರೂಪಿಸುತ್ತಿರುವುದರಿಂದಲೇ ಈ ಕ್ರಮ ಕೈಗೊಳ್ಳಲಾಗಿದೆ.

ಇಷ್ಟರಲ್ಲೇ ಸಮಾಧಾನಗೊಳ್ಳದೆ, ರೈಲ್ವೆ ದರ ಹೆಚ್ಚಿಸುವ ಹಾಗೆಯೇ ಇನ್ನೂ ಹೊಸ ತೆರಿಗೆಗಳನ್ನು ಹೇರುವ ಹೇಳಿಕೆಗಳನ್ನೇ ಕೇಂದ್ರ ಮಂತ್ರಿಗಳು ನೀಡುತ್ತಿದ್ದಾರೆ. ಕೇಂದ್ರ ಸರಕಾರದ ಬೆಲೆ ಹೆಚ್ಚಿಸುವ ಕರಭಾರ ಹೇರುವ ನೀತಿ ವಿರುದ್ಧ ಪ್ರಚಂಡ ಪ್ರತಿಭಟನೆ ಎದ್ದು ಬರಬೇಕಾಗಿದೆ.

ಭಾರತ ಬಂದ್‌ನ ಅಂಗವಾಗಿ ಫೆಬ್ರವರಿ 26 ರಂದು ಕರ್ನಾಟಕ ಬಂದ್ ಯಶಸ್ವಿಯಾಗಲಿ. ರೈಲ್ವೆ, ಬಸ್, ಆಟೋ ಲಾರಿಗಳೆಲ್ಲಾ ಚಲಿಸದಿರಲಿ, ಕಾರ್ಖಾನೆಗಳು ನಡೆಯದಿರಲಿ. ಅಂಗಡಿಗಳು ತೆರೆಯದಿರಲಿ. ಜನಸ್ತೋಮ ರಸ್ತೆಯಲ್ಲಿ ಕಾಣದಿರಲಿ.

ಭಾರತದ ಜನತೆ ರಾಜೀವಗಾಂಧಿಯವರ ಆಹ್ವಾನ ಸ್ವೀಕರಿಸಲಿ. ಪ್ರಥಮ ಭಾರತ ಬಂದ್ ಯಶಸ್ವಿಯಾಗಲಿ.

ಬೆಳವಣಿಗೆಯ ಸ್ಥಗಿತತೆಗಳನ್ನು ನಿವಾರಿಸದ ರಾಜ್ಯ ಬಜೆಟ್

ದೆಹಲಿಯಲ್ಲಿ 20,000 ಕ್ಕೂ ಹೆಚ್ಚಿನ ಜನ ಲೋಕಸಭೆಯ ಮುಂದೆ ಮಹಾ ಪ್ರದರ್ಶನ ನಡೆಸಿ, ಲೋಕ ಸಭಾ ಸದಸ್ಯರೂ ಸೇರಿ 14 ವಿರೋಧ ಪಕ್ಷಗಳ ನಾಯಕರು ಬಂಧನಕ್ಕೊಳಗಾಗುತ್ತಿರುವಾಗಲೇ ರಾಮಕೃಷ್ಣ ಹೆಗ್ಗಡೆಯವರು ವಿಧಾನ ಸಭೆಯಲ್ಲಿ ಬಜೆಟ್ ಮಂಡಿಸುತ್ತಾ, "ಭಾರತ ಸರ್ಕಾರವು ಬೆಲೆ ಏರಿಸಿದುದರ ಹಿಂದಿನ ತರ್ಕ ನನಗೆ ಅರ್ಥವಾಗುತ್ತಿಲ್ಲ. ಇದು ರಾಜ್ಯ ಸರ್ಕಾರಕ್ಕೆ ನ್ಯಾಯಬದ್ಧ ಉತ್ಪಾದನಾ ಶುಲ್ಕದ ಪಾಲಿನ ಹಣ ದೊರೆಯದಂತೆ ಮಾಡಿ ರಾಜ್ಯದ ಆರ್ಥಿಕ ಹಿತ ದೃಷ್ಟಿಗೆ ಪ್ರತಿಕೂಲವಾಗುತ್ತದೆ" ಎಂದು ಹೇಳಿರುವುದು ಸ್ವಾಗತಾರ್ಹವಾದುದ್ದು. ಬಡತನ, ನಿರುದ್ಯೋಗ ನಿರಕ್ಷರತೆಯನ್ನು ಹೋಗಲಾಡಿಸದ ಕಾಂಗ್ರೆಸ್ (ಐ) ನ 38 ವರ್ಷಗಳ ಆರ್ಥಿಕ ಧೋರಣೆಯನ್ನು ಟೀಕಿಸುತ್ತಲೇ ಅದಕ್ಕೆ ಕಾರಣವಾಗಿರುವ, ಕೇಂದ್ರ ಸರ್ಕಾರದ ದೀರ್ಘಾವಧಿ ಹಣಕಾಸು ನೀತಿಯನ್ನು ಸ್ವಾಗತಿಸುತ್ತೇನೆ ಎಂದು ತಮ್ಮ ತೂಗುಯ್ಯಾಲೆಯನ್ನು, ಗೊಂದಲವನ್ನೂ ವ್ಯಕ್ತಗೊಳಿಸಿದ್ದಾರೆ.

ಕಳೆದ ಒಂದು, ಒಂದೂವರೆ ದಶಕಗಳಿಂದ ಸ್ಥಗಿತವಾಗಿರುವ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಅಲ್ಲಾಡಿಸಿ ಬೆಳವಣಿಗೆಯ ದಾರಿಗೆ ಹಚ್ಚುವ ಯಾವುದೇ ಪ್ರಯತ್ನ, ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ 17 ವಿರೋಧ ಪಕ್ಷಗಳು ಹೆಗ್ಗಡೆಯವರೂ ಸೇರಿ 5 ಜನ ಮುಖ್ಯಮಂತ್ರಿಗಳು ಒಪ್ಪಿದ ಶ್ರೀನಗರ, ಕಲ್ಕತ್ತಾ ಶೃಂಗ ಸಭೆಗಳ ಪರ್ಯಾಯ ಆರ್ಥಿಕ ಕಾರ್ಯಕ್ರಮದ ಸಾರವನ್ನು ಒಳಗೊಳ್ಳುವ ಯಾವುದೇ ಪ್ರಯತ್ನ ಈ ಬಜೆಟ್‌ನಲ್ಲಿ ಕಾಣಸಿಗುವುದಿಲ್ಲ. ದೇಶದಲ್ಲಿಯೇ ಅತ್ಯಂತ ಹೆಚ್ಚಿನ ಕರಭಾರದಿಂದ ತತ್ತರಿಸುತ್ತಿರುವ ರಾಜ್ಯಗಳ ಮೊದಲ ಸಾಲಿನಲ್ಲಿರುವ ಕರ್ನಾಟಕದ ಜನತೆಯ ಮೇಲೆ ಮತ್ತಷ್ಟು ಅಪ್ರತ್ಯಕ್ಷ ತೆರಿಗೆಗಳನ್ನು ಹಾಕಲಾಗಿದೆ.

ರಾಜ್ಯದ ಬರಗಾಲ ಪೀಡಿತ ಪ್ರದೇಶಗಳ ಸಣ್ಣ ರೈತರಿಗೆ 4 ಕೋಟಿರೂ ಬಡ್ಡಿ ರಿಯಾಯಿತಿ, ವಸೂಲಾಗದ ಹಳೇ ಸಾಲ 6 ಕೋಟಿರೂಗಳ ಮನ್ನಾ ಅಲ್ಲದೆ ನೀರಾವರಿಯ ಬೆಳವಣಿಗೆಯನ್ನು ಸ್ವಲ್ಪ ಮಟ್ಟಿಗಾದರೂ ವಿಸ್ತರಿಸುವ ಪ್ರಯತ್ನಕ್ಕೆ 30 ಕೋಟಿ ಹೆಚ್ಚಳ, ಅಗ್ಗದ ಭೂ ಅಭಿವೃದ್ಧಿ ಸಾಲ, ಇತ್ಯಾದಿ ಕ್ರಮಗಳನ್ನೂ ಪಕ್ಷ ಹಿಂದಿನಿಂದಲೇ ಒತ್ತಾಯಿಸುತ್ತಾ ಬಂದಿರುವ ಆಹಾರ ಧಾನ್ಯ, ಔಷಧಿಗಳು ಇತ್ಯಾದಿಗಳಿಗೆ ತೆರಿಗೆ ವಿನಾಯಿತಿ, ಇಳಿಕೆಯನ್ನೂ ಸ್ವಾಗತಿಸುತ್ತೇನೆ.

ಆದರೆ ಆರ್ಥಿಕ ಬೆಳವಣಿಗೆಯ ಸ್ಥಗಿತತೆಯ ಫಲವಾಗಿ ಮೂಡಿಬರುವ ಜನಸಮುದಾಯದ ಹೋರಾಟವನ್ನು ಚಿವುಟಿ ಹಾಕಲು ಸಂಘಟಿತ-ಅಸಂಘಟಿತ ಕಾರ್ಮಿಕರನ್ನು ಹಳ್ಳಿ – ನಗರ ವಾಸಿಗಳನ್ನು, ನೀರಾವರಿ–ಒಣಪ್ರದೇಶದ ರೈತರನ್ನು ಒಬ್ಬರ ಮೇಲೊಬ್ಬರನ್ನು ಎತ್ತಿ ಕಟ್ಟುವ ಹಿಂದಿನ ಬಜೆಟ್‌ನಲ್ಲಿಯ ಪ್ರಯತ್ನ ಮತ್ತಷ್ಟು ತೀವ್ರವಾಗಿ ಮುಂದುವರಿದಿದೆ. ಗಡಿ ಪ್ರಶ್ನೆ, ಭಾಷಾ ಪ್ರಶ್ನೆಯ ಜೊತೆಗೆ ಈ ಪ್ರಶ್ನೆಗಳನ್ನೆತ್ತಿ ಜನರ ಐಕ್ಯತೆಯನ್ನು ಒಡೆಯುವ ಪ್ರಯತ್ನವನ್ನು ಖಂಡಿಸುತ್ತೇವೆ. ಹಾಗೆಯೇ ಹಿಂದಿನ ಬಜೆಟ್‌ನಲ್ಲಿ ಬಹಳವಾಗಿ ಕೊಚ್ಚಿಕೊಂಡ "ಜನತಾ ವಲಯ" ಕೇವಲ ಒಂದೇ ವರ್ಷದಲ್ಲಿ ಹೇಳಹೆಸರಿಲ್ಲದಂತೆ ಮಾಯವಾದದ್ದು ಆ "ಜನತಾವಲಯ"ವೊಂದು ಜನರ ಕಣ್ಣಿಗೆ ಮಣ್ಣೆರಚುವ ವಾಗ್ಜಾಲವೆಂದು ಸಾಬೀತು ಪಡಿಸುತ್ತದೆ.

ಒಟ್ಟಿನಲ್ಲಿ ಪರ್ಯಾಯ ಆರ್ಥಿಕ ನೀತಿಗಳನ್ನು ಜಾರಿಗೆ ತರಲು ಬೇಕಾದ ರಾಜಕೀಯ ದೃಢ ನಿರ್ಧಾರವಿಲ್ಲದ ಹೊರತು ಆರ್ಥಿಕ ಬಿಕ್ಕಟ್ಟು, ಅದರ ಫಲವಾದ ನಿರುದ್ಯೋಗ ನಿರಕ್ಷರತೆ, ಬಡತನವನ್ನು ಹೋಗಲಾಡಿಸುತ್ತೇವೆ ಎಂದು ಸಾರುವುದು, ಕೇವಲ ಮಾತಿನ ಭ್ರಮಾಜಾಲವಾಗುತ್ತದೆ ಎಂಬುದು ಸ್ಪಷ್ಟವಾಗಿದೆ, ಮುಂದೆಯೂ ಸ್ಪಷ್ಟವಾಗುತ್ತದೆ.

ಒಳಗೇನಿದೆ........

ಅಭೂತಪೂರ್ವ ಪಾರ್ಲಿಮೆಂಟ್ ಚಲೊ

12 ಸಾವಿರ ಜನರ ಬಂಧನ

ಲೋಕಸಭಾ ವಿಜಯದ ಎರಡೇ ತಿಂಗಳ ನಂತರ 1985 ಮಾರ್ಚ್‌ನಲ್ಲಿ ರಾಜೀವ ಗಾಂಧಿಯವರು ತಮ್ಮ ಮೊದಲ ಬಜೆಟ್ ಅನ್ನು ಮಂಡಿಸಿ, 21 ನೇ ಶತಮಾನಕ್ಕೆ ಹಾರುವ ನೀತಿಯನ್ನು ಸಾರಿದಾಗ ನಮ್ಮ ದೇಶದ ಅನೇಕ ವಿರೋಧ ಪಕ್ಷಗಳ ಪ್ರತಿಕ್ರಿಯೆ, ಪತ್ರಿಕೆಗಳ, ಅರ್ಥಶಾಸ್ತ್ರಜ್ಞರ ಪ್ರತಿಕ್ರಿಯೆ ರಾಜೀವ ಗಾಂಧಿಯವರಿಗೆ ಅಪೂರ್ವ ಸಂತಸ ತಂದಿತು. ಈ ಪ್ರತಿಕ್ರಿಯೆಗೆ ತೀರಾ ಭಿನ್ನವಾದ, ನೂತನ ಆರ್ಥಿಕ ನೀತಿಗೆ ತನ್ನ ತೀವ್ರ ವಿರೋಧವನ್ನು ವ್ಯಕ್ತಗೊಳಿಸಿದ್ದ ಸಿ ಪಿ ಐ (ಎಂ) ಏಕಾಕಿಯಾಗಿ ರಾಷ್ಟ್ರದಲ್ಲೆಲ್ಲಾ "ಬಜೆಟ್ ವಿರೋಧಿ ವಾರ" ವನ್ನು ಆಚರಿಸಿತು.

ಆದೇ ಬಜೆಟ್ ನೀತಿಯ ಫಲವಾದ ಬೆಲೆ ಏರಿಕೆಗಳು ಇಂದು ವಿರೋಧ ಪಕ್ಷಗಳಿಂದ, ಪತ್ರಿಕೆಗಳಿಂದ ಪಡೆದ ಪ್ರತಿಕ್ರಿಯೆಯೇ ಬೇರೆ. ದೇಶದ ಜನಸಾಮಾನ್ಯರಿಗಾದ ಆಘಾತವನ್ನು ಪ್ರತಿಬಿಂಬಿಸುವಂತೆ ನಡೆದ, ದೆಹಲಿ ಪ. ಬಂಗಾಳ, ತ್ರಿಪುರಾ ಬಂದ್‌ಗಳು ಎಲ್ಲೆಡೆಯು ಮೆರವಣಿಗೆ ಸಭೆಗಳು ಅದೆಲ್ಲದಕ್ಕೆ ಮಕುಟಮಣಿಯಾಗಿ 14 ವಿರೋಧ ಪಕ್ಷಗಳು ಸೇರಿ ನೀಡಿದ "ಅಖಿಲ ಭಾರತ ಬಂದ್" ಕರೆ ಆಳುವ ಕಾಂಗ್ರೆಸ್ ಪಕ್ಷಕ್ಕೆ ಸವಾಲೆಸೆದಿವೆ.

ಈ ಬಂದ್‌ಗೆ ಉತ್ತೇಜನ ನೀಡುವಂತೆ, ಪ್ರಧಾನಿ ಕರೆದ ಲೋಕಸಭಾ ಅಧಿವೇಶನದ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ಬಹಿಷ್ಕರಿಸಿದ ವಿರೋಧ ಪಕ್ಷಗಳು, ಮುಂದೆ ಹೋಗಿ ರಾಷ್ಟ್ರಪತಿಯವರ ಉದ್ಘಾಟನಾ ಭಾಷಣವನ್ನು ಬಹಿಷ್ಕರಿಸಿದ್ದಾರೆ. ಅಷ್ಟೇ ಅಲ್ಲದೆ, ಅದೇ ದಿನ ನಡೆದ ಪಾರ್ಲಿಮೆಂಟ್ ಚಲೋಗೆ, ಕೇಂದ್ರ ಸರಕಾರದ ನಿರೀಕ್ಷೆ (4–5000) ಮೀರಿ ಕಾರ್ಮಿಕರು, ಕಛೇರಿಗಳ ನೌಕರರು ಮಕ್ಕಳನ್ನು ಎತ್ತಿಕೊಂಡ ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಎಲ್ಲಾ ಸೇರಿ 20,000 ಜನ ನೆರೆದರು. ಪತ್ರಿಕೆಗಳಲ್ಲಿ ವರದಿಯಾದಂತೆ 12,000 ಜನ 100 ಎಂ.ಪಿ.ಗಳೂ ಸೇರಿ ಬಂಧಿತರಾಗಿದ್ದಾರೆ.

ಈ 14 ಪಕ್ಷಗಳ ಒಕ್ಕೂಟದಲ್ಲಿನ ಕರೆಯಲ್ಲಿ, ಸಿ.ಪಿ.ಐ (ಎಂ) ಪಾಲಿಟ್ ಬ್ಯೂರೋ ಸದಸ್ಯ ಇ. ಎಂ. ಎಸ್. ... (illegible)

(8ನೇ ಪುಟ ನೋಡಿ)

ಮುಂದಿನ ಸಂಚಿಕೆಯಲ್ಲಿ

86–87 ರ ರಾಜ್ಯ ಬಜೆಟ್ – ಒಂದು ವಿಶ್ಲೇಷಣೆ.

ಎಡರಂಗ ಸರ್ಕಾರ – ಜನತಾ ಸರಕಾರದ ಬಜೆಟ್ ಹೋಲಿಕೆ

ಜನತಾ ಸರ್ಕಾರದ ಹಿಂದಿನ ಬಜೆಟ್ – ಈಗಿನ ಬಜೆಟ್.

ಎಡರಂಗ ಸರ್ಕಾರದ ನಾಯಕತ್ವದಲ್ಲಿ

ಸಂಘಟಿತ ಜನತೆಯಿಂದ ಬರ ಪರಿಹಾರ

1977 ರಲ್ಲಿ ಪಶ್ಚಿಮ ಬಂಗಾಳದ ಮೊದಲ ಎಡರಂಗ ಸರಕಾರ ಭಾರೀ ಬಹುಮತದಿಂದ ಸ್ಥಾಪನೆಗೊಂಡು ಹಂಬಲಿಸುವ ಜನತೆಯ ವಿವಿಧ ಸಮಸ್ಯೆಗಳಿಗೆ ಪರಿಹಾರ ಮಾಡಬಲ್ಲ ಹಲವು ಕಾರ್ಯಕ್ರಮಗಳು ಜ್ಯಾರಿಗೊಳ್ಳಲಾರಂಭಿಸಿದ್ದವಷ್ಟೆ. ಒಂದೇ ವರ್ಷದೊಳಗೆ ಅಂದರೆ 1978 ರಲ್ಲಿ ಆ ರಾಜ್ಯ ಈ ಶತಮಾನದಲ್ಲೇ ಅತ್ಯಂತ ಭೀಕರವಾದ ಪ್ರವಾಹಕ್ಕೀಡಾಯಿತು. ಎಡರಂಗ ಸರಕಾರ, ನೂರಾರು ಸಾಮೂಹಿಕ ಸಂಘಟನೆಗಳು ಆಗತಾನೇ ಹೊಸದಾಗಿ ಚುನಾಯಿತಗೊಂಡಿದ್ದ ಪಂಚಾಯಿತಿಗಳ ನೇತೃತ್ವದಲ್ಲಿ ರೈತರು, ಕೂಲಿಗಾರರು ಯುವಕರು, ವಿದ್ಯಾರ್ಥಿಗಳು ಪ್ರಕೃತಿಯ ಈ ಸವಾಲನ್ನು ಎದುರಿಸಿ ಅಹೋರಾತ್ರಿ ದುಡಿದರು.

ಈ ರೀತಿ ಪ್ರವಾಹ ಪೀಡಿತ ಪ್ರದೇಶಗಳ ಪುನರ್ರಚನೆಯ ಸಂಘಟಿತ ಕೆಲಸ ನಡೆಯುತ್ತಿರುವಾಗಲೇ 1981–82 ಹಾಗೂ 1982–83 ರಲ್ಲಿ ರಾಜ್ಯದ ಹಲವು ಗ್ರಾಮಗಳು ಬರಕ್ಕೆ ತುತ್ತಾಗಿ ತತ್ತರಿಸಲಾರಂಭಿಸಿದವು. ಬಂಗಾಳದ ಪ್ರಮುಖ ಆಹಾರ ಬೆಳೆಯಾದ ಭತ್ತದ ಉತ್ಪಾದನೆ ಎರಡು ವರ್ಷಗಳು ತೀರಾ ಕಮ್ಮಿಯಾಯಿತು ಜತೆಗೆ ನದಿ, ಕಾಲುವೆ, ಜಲಾಶಯಗಳಲ್ಲಿ ಮಾತ್ರವಲ್ಲ ಏತ ನೀರಾವರಿ, ಕೊಳವೆ ಬಾವಿಗಳು, ಕೆರೆಗಳು, ಕಾಲುವೆಗಳು, ಸರೋವರಗಳಲ್ಲಿ ನೀರಿನಮಟ್ಟ ಅತ್ಯಂತ ಕೆಳಕ್ಕಿಳಿಯಿತು. ಗ್ರಾಮಾಂತರ ಬಂಗಾಳದ ಆರ್ಥಿಕತೆ, ತನ್ಮೂಲಕ ಇಡೀ ರಾಜ್ಯದ ಆರ್ಥಿಕತೆ ಈ ಅತೀವ ಅನಾವೃಷ್ಟಿಯಿಂದಾಗಿ ಅಸ್ತವ್ಯಸ್ತಗೊಂಡಿತು.

ಆದರೆ ಪರಿಸ್ಥಿತಿ ಹದಗೆಡುವವರೆಗೆ ಸುಮ್ಮನಿರುವ ಸರಕಾರವಾಗಿರಲಿಲ್ಲ ಎಡರಂಗ ಸರಕಾರ. 1981 ರಿಂದ ಮಳೆ ಅಭಾವ ತಲೆದೋರಲಾರಂಭಿಸಿದಾಗ ಬರದ ಆಘಾತದ ಸಾಧ್ಯತೆ ಬಗ್ಗೆ ಯೋಚಿಸಿ ಎಡರಂಗ ಸರಕಾರದ ಕೃಷಿ, ಆಹಾರ ಮತ್ತು ಪೂರೈಕೆ, ಪಶು ಸಂಗೋಪನಾ ಇಲಾಖೆಗಳು ಇದನ್ನು ಎದುರಿಸಲು ಸೂಕ್ತ ಯೋಜನೆಗಳನ್ನು ತಯಾರಿಸಲಾರಂಭಿಸಿದ್ದವು

ಹಳ್ಳಿಗರಲ್ಲಿ ಆತ್ಮವಿಶ್ವಾಸ

ಬರದ ಹೊಡೆತ ತೀವ್ರವಾಗಿ ಅನುಭವಕ್ಕೆ ಬರುವುದು ಗ್ರಾಮಾಂತರ ಪ್ರದೇಶಗಳಲ್ಲಿ ಯಾದ್ದರಿಂದ ಗ್ರಾಮಾಂತರ ಆರ್ಥಿಕವನ್ನು ಹಾಗೂ ಸಾಮಾಜಿಕ ಸ್ಥಿತಿಗಳನ್ನು ಸರಿಯಾದ ರೀತಿಯಲ್ಲಿಡಲು ತುರ್ತು ಆಧಾರದ ಮೇಲೆ ಪ್ರಯತ್ನ ನಡೆಸುವುದು ಅತ್ಯಗತ್ಯ ಎಂಬ ಅರಿವು ಎಡರಂಗ ಸರ್ಕಾರಕ್ಕಿತ್ತು. ಅದು ಪಂಚಾಯತುಗಳನ್ನು ಹಾಗೂ ಸಾಮೂಹಿಕ ಸಂಘಟನೆಗಳನ್ನು ಕಾರ್ಯಕ್ರಮಗಳಲ್ಲಿ ಒಳಗೊಳ್ಳುವಂತೆ ಮಾಡಿ ಈ ಕೆಲಸಕ್ಕೆ ಆದ್ಯತೆ ನೀಡಿತು. ಗ್ರಾಮಾಂತರ ಜನತೆಯಲ್ಲಿ ಆತ್ಮ ಗೌರವ ಮೂಡಿಸಲು ಎಡರಂಗ ಸರ್ಕಾರ ಈಗಾಗಲೇ "ಕೂಲಿಗಾಗಿ ಕಾಳು" ಯೋಜನೆಯ ಮೇಲೆ ವಿಶೇಷ ಒತ್ತು ನೀಡಿತ್ತು. ಆದರೆ 1980 ರಲ್ಲಿ ಕೇಂದ್ರದಲ್ಲಿ ಆರಿಸಿ ಬಂದ ಕಾಂಗ್ರೆಸ್ (ಐ) ಸರಕಾರ ಈ ಯೋಜನೆಯನ್ನು ರದ್ದುಗೊಳಿಸಿತು ಆದರೂ ರಾಜ್ಯ ಸರ್ಕಾರ ಸುಮ್ಮನೆ ಕೂರಲಿಲ್ಲ ಗ್ರಾಮಾಂತರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿತು

ಬರವನ್ನು ಎದುರಿಸುವ ಮೊದಲನೆಯ ಕ್ರಮವಾಗಿ, ರಾಜ್ಯ ಸರಕಾರ ಇದ್ದ ಎಲ್ಲಾ ಜಲ ಸಂಪನ್ಮೂಲಗಳನ್ನು ಪೂರ್ಣವಾಗಿ ಬಳಸಿಕೊಂಡಿತು. ಪರ್ಯಾಯ ಬೆಳೆ ಉತ್ಪಾದನೆ ಎಡರಂಗ ಸರ್ಕಾರ ಕೈಗೊಂಡ ಎರಡನೇ ಕಾರ್ಯಕ್ರಮ ಇದರ ಪ್ರಕಾರ ಹಿಂಗಾರು ಬೆಳೆಗಳನ್ನು ಹದಿಮೂರರೂವರೆ ಲಕ್ಷ ಹೆಕ್ಟೇರು ಬದಲು 24 ಲಕ್ಷ ಹೆಕ್ಟೇರುಗಳಲ್ಲಿ ಬೆಳೆಸಬೇಕೆಂದು ನಿಶ್ಚಯಿಸಲಾಯಿತು. ಬೋರೋ ಭತ್ತದ ಬದಲು ಕಡಿಮೆ ನೀರು ಸಾಕಾಗುವ ಗೋಧಿ, ಧಾನ್ಯ, ಎಣ್ಣೆಯ ಬೀಜಗಳು, ಆಲೂಗಡ್ಡೆ ಮುಂತಾದವುಗಳನ್ನು ಬೆಳೆಸುವಂತೆ ಪ್ರೋತ್ಸಾಹಿಸಲಾಯಿತು, ತೀವ್ರ ಪ್ರಚಾರ ನಡೆಸಲಾಯಿತ್ತು. ಮುಂಬರಲಿದ್ದ ಮುಂಗಾರು ಭತ್ತದ ಬೀಜಗಳನ್ನು ಕಾಯ್ದಿಡುವುದು ಸರಕಾರದ ಮೂರನೇ ಕಾರ್ಯಕ್ರಮವಾಗಿತ್ತು. ಕೊಳವೆ ಬಾವಿ ತೋಡಿಸುವುದು, ಸರಿಪಡಿಸುವುದು, ಮೇವು ಒದಗಿಸುವುದು, ಗೋಶಾಲೆಗಳನ್ನು ತೆರೆಯುವುದು ಹಳ್ಳಿಗಳಲ್ಲಿ ವಿವಿಧ ಯೋಜನೆಗಳ ಮೂಲಕ ಉದ್ಯೋಗ ಸೃಷ್ಟಿ ಇತ್ಯಾದಿ ಹಲವಾರು ಪರಿಹಾರ ಹಾಗೂ ಪುನರ್ವಸತಿ ಕೆಲಸಗಳನ್ನು ಪ್ರಾರಂಭಿಸಿ ಇವೆಲ್ಲವುಗಳ ಸಂಯೋಜನೆಗೆ ಪ್ರತಿಯೊಂದು ಜಿಲ್ಲೆಯಲ್ಲಿ "ಬರ ಪರಿಹಾರ ಸಮಿತಿ" ರಚಿಸಲಾಯಿತು.

"ನಾವು ಗೆದ್ದೇಗೆಲ್ಲುವೆವು"

ಬಂಗಾಳದಲ್ಲಿ ಅದುವರೆಗಿನ ಸರಕಾರಗಳು ವಿಪತ್ತಿನಿಂದ ಪ್ರಾಣ ಉಳಿಸುವುದಷ್ಟೇ ಪರಿಹಾರ ಕಾರ್ಯವೆಂದು ಭಾವಿಸಿದ್ದವು. ಇತರೆಡೆ ಈಗಲೂ ಕೂಡಾ ಹಲವು ಸರಕಾರಗಳು ಹೀಗೆ ಭಾವಿಸಿವೆ. ಆದರೆ ಎಡರಂಗ ಸರ್ಕಾರ ಈ ಗುಂಪಿಗೆ ಸೇರಿರಲಿಲ್ಲ ಪ್ರಾಣ ಉಳಿಸುವುದು ತನ್ನ ಪ್ರಾಥಮಿಕ ಕರ್ತವ್ಯವಷ್ಟೇ ಎಂದು ಅರಿತಿದ್ದ ಎಡರಂಗ ಸರ್ಕಾರ ಹೀಗೆ ಉಳಿಸಲ್ಪಟ್ಟ ಜನರಿಗಾಗಿ ವಿವಿಧ ಪುನರ್ವಸತಿ ಯೋಜನೆಗಳನ್ನು ಕಲ್ಪಿಸುವುದು ಕೂಡಾ ತನ್ನ ಜವಾಬ್ದಾರಿ ಎಂದು ತಿಳಿದಿತ್ತು. ಆದ್ದರಿಂದ ಹಲವು ಪೂರ್ವಯೋಜಿತ, ಸುನಿಯಂತ್ರಿತ ಯೋಜನೆಗಳನ್ನು ಜಾರಿಗೊಳಿಸಲು ಅದು ಮುಂದೆ ಬಂತು. ಜೀವನಾವಶ್ಯಕ ಆಹಾರ ಸಾಮಗ್ರಿಗಳನ್ನು ಪೂರೈಸಲು ನಾಲ್ಕು ಲಕ್ಷ ಟನ್‌ಗಳ ಅವಶ್ಯಕತೆಯಿದ್ದ ಕೇಂದ್ರ ಸರಕಾರ ಕೇವಲ ಎರಡುವರೆ ಲಕ್ಷ ಟನ್ ಪೂರೈಸಿದರೂ, ಇದು ಕೂಡಾ ಸಮಯಕ್ಕೆ ಸರಿಯಾಗಿ ದೊರೆಯದಿದ್ದರೂ ಎದೆಗುಂದದೆ ಸರ್ಕಾರ ತಕ್ಕ ಕ್ರಮ ಕೈಗೊಂಡು ಹಸಿವಿನಿಂದ ಯಾರೂ ಸಾಯದಂತೆ ನೋಡಿಕೊಳ್ಳುವುದಾಗಿ ಪಣ ತೊಟ್ಟಿತು ವಿವಿಧ ಯೋಜನೆ

(6ನೇ ಪುಟ ನೋಡಿ)

ಭಾರತವನ್ನು ಬಾಧಿಸಿದ ಬರಗಾಲಗಳು

1857 ರಲ್ಲಿ ಭಾರತ ಬ್ರಿಟಿಶ್ ರಾಣಿಯ ಆಳ್ವಿಕೆಗೆ ಒಳಗಾದ ನಂತರದ ಕೆಲವು ಭೀಕರ ಬರಗಾಲಗಳ ಅಂಕೆ ಸಂಖ್ಯೆ ಹೀಗಿವೆ—

1861 : ವಾಯುವ್ಯ ಪ್ರಾಂತ್ಯದಲ್ಲಿ ಪಂಜಾಬಿನಿಂದ ಆಗ್ರಾದವರೆಗೆ ಹರಡಿದ ವಿಶಾಲ ಪ್ರದೇಶ ಬರಗಾಲಕ್ಕೆ ತುತ್ತಾಯಿತು ಸುಮಾರು 2 ಲಕ್ಷ ಜನರು ಸತ್ತರು

1866 : ಈ ಪ್ರದೇಶದಲ್ಲಿ ಇನ್ನೊಮ್ಮೆ ಬರಗಾಲದ ದಾಳಿ—ಈ ಬಾರಿಯ ಸಾವಿನ ಸಂಖ್ಯೆ ಎರಡೂವರೆ ಲಕ್ಷ.

1865-66 : ಒರಿಸ್ಸಾ, ಬಿಹಾರ, ಉತ್ತರ ಬಂಗಾಲ ಹಾಗೂ ಮದ್ರಾಸ್ ಪ್ರಾಂತ್ಯದ ಕೆಲವು ಪ್ರದೇಶಗಳ ಸುಮಾರು 70 ಸಾವಿರ ಮೈಲು ವ್ಯಾಪ್ತಿಯ ಪ್ರದೇಶದಲ್ಲಿ ತೀವ್ರ ಬರಗಾಲ. ಕೇವಲ ಒರಿಸ್ಸಾದಲ್ಲೇ 13 ಲಕ್ಷ ಮಂದಿ ಪ್ರಾಣ ಕಳೆಕೊಂಡರು. ಉತ್ತರ ಬಂಗಾಲ ಮತ್ತು ಬಿಹಾರದಲ್ಲಿ 1 ಲಕ್ಷ 35 ಸಾವಿರ, ಬ್ರಿಟಿಷ್ ಸರಕಾರದ ನಿರ್ಲಕ್ಷ್ಯವನ್ನು ತಾಳಲಾರದ ಒರಿಸ್ಸಾದಲ್ಲಿ 1966 ರಲ್ಲಿ ಗಲಭೆಗಳು ನಡೆದವು.

1876-78 : ದಕ್ಷಿಣ ಭಾರತದಲ್ಲಿ ದಖ್ಖನ ಪೀಠಭೂಮಿಯಿಂದ ಮದ್ರಾಸ್ ಪ್ರಾಂತ್ಯದವರೆಗಿನ 2 ಲಕ್ಷ ಚದರ ಮೈಲುಗಳ ಪ್ರದೇಶದಲ್ಲಿ ಅತ್ಯಂತ ಭಯಾನಕ ಬರಗಾಲ. 3 ಕೋಟಿ 60 ಲಕ್ಷ ಜನರನ್ನು ಇದು ತಟ್ಟಿತು. ದಖ್ಖನದಲ್ಲಿ 8 ಲಕ್ಷ, ಮದ್ರಾಸ್ ಪ್ರಾಂತ್ಯದಲ್ಲಿ 35 ಲಕ್ಷ ಹಾಗೂ ಮೈಸೂರು ಪ್ರಾಂತ್ಯದಲ್ಲಿ 10.5 ಲಕ್ಷ ಜೀವಗಳನ್ನು ಇದು ಬಲಿ ತೆಗೆದುಕೊಂಡಿತು

ಈ ಅವಧಿಯಲ್ಲಿ ಬ್ರಿಟಿಶ್ ಕೇಂದ್ರ ಸರಕಾರ ಹಾಗೂ ಪ್ರಾಂತೀಯ ಸರಕಾರಗಳ ನಡುವೆ ಪರಿಹಾರ ಕಾರ್ಯ ಕುರಿತಾಗಿ ಬಹಿರಂಗ ಘರ್ಷಣೆ ನಡೆಯಿತ್ತು.

1879 : ಉತ್ತರ ಭಾರತದಲ್ಲಿ ಬರಗಾಲ–14 ಲಕ್ಷ ಜೀವಗಳ ಹಾನಿ.

1896-97 : 19 ನೇ ಶತಮಾನದ ಅತ್ಯಂತ ಭೀಕರ ಬರಗಾಲ. ಪಂಜಾಬಿನಿಂದ ಬರ್ಮಾದವರೆಗೆ, ಬಿಹಾರಿನಿಂದ ಮದ್ರಾಸ್‌ವರೆಗೆ ವ್ಯಾಪಿಸಿದ ಈ ವಿನಾಶದಲ್ಲಿ 45 ಲಕ್ಷ ಜನ ಬಲಿಯಾದರು. ಬರಗಾಲದ ನಂತರದ ವರ್ಷ ಅಂದರೆ 1898 ರಲ್ಲಿ ಕೂಡ ಬರಗಾಲದ ಪರಿಣಾಮಗಳಿಂದ 6.5 ಲಕ್ಷ ಜೀವಗಳು ಬಲಿಯಾದವು. ಬ್ರಿಟಿಶ್ ಸರಕಾರದ ನಿರ್ಲಕ್ಷ್ಯದ ವಿರುದ್ಧ ಹಲವು ನಗರಗಳಲ್ಲಿ ಗಲಭೆಗಳು ನಡೆದವು. ಮುಂಬೈಯಲ್ಲಿಯೂ ಮತ ಪ್ರದರ್ಶನ ನಡೆಯಿತು.

20 ನೇ ಶತಮಾನದ ಮೊದಲ ದಶಕದಲ್ಲಿ 1904 ಒಂದನ್ನು ಬಿಟ್ಟು ಬೇರೆಲ್ಲಾ ವರ್ಷಗಳು ಬರಗಾಲದ ವರ್ಷಗಳೇ ಆಗಿದ್ದವು.

1943 : ಬೆಳೆ ಬಾರದೆ ಹಾಗೂ ದ್ವಿತೀಯ ಮಹಾ ಯುದ್ಧದ ದುಷ್ಪರಿಣಾಮಗಳಿಂದಾಗಿ ಬಂದ 1943 ರ ಬಂಗಾಲದ ಬರ ಒಂದು ಅತ್ಯಂತ ಭೀಕರ ನೆನಪು. 35 ಲಕ್ಷ ಜನ ತಮ್ಮ ಮನೆ—ಮಾರು ಬಿಟ್ಟು ಕಲ್ಕತ್ತಾ ನಗರಕ್ಕೆ ಬಂದು ಆ ನಗರದ ಹಾದಿ ಬೀದಿಗಳಲ್ಲಿ ಪ್ರಾಣ ಕಳೆಕೊಂಡರು. ●

ನಿನ ಗುಡಿಗೆ ಬೆಂಕಿ ಹೊತ್ತೀಸ

ಏನು ಮಾಡಿದೆಯೋ ಸ್ವಾಮಿ ಮರಿ ಮೋಸಾ
ಯಾಕೆ ತಂದ್ಯೋ ಇಂಥಾ ದಿವಸಾ
ಏನ ಮಾಡಿದ್ಯೋ ಸಾಂಬಶಿವನೆ ನಿನ್ನ
ಗುಡಿಗೆ ಬೆಂಕಿ ಹೊತ್ತೀಸ !

ಉಣಲಾಕ ಕೂಳಿಲ್ಲ....

ಕಣಜ ಬೆಳೆದ ಮನೆಗೆ ಉಣಲಾಕ ಕೂಳಿಲ್ಲ
ಬೇಸಾಯ ಕವಣೆ ಬಲವಿಲ್ಲ ! ಕೂಲ್ಯವರ
ಸುಡಬೇಕ ಜನುಮ ಸುಖವಿಲ್ಲ

[ಕಣಜ ಹಾವುಗಳು, ಸರಕಾರದ ಗೋಡೌನುಗಳಲ್ಲಿ ಉಕ್ಕಿ ಚೆಲ್ಲುತ್ತಿವೆ ಬೆಳೆದ ಕೂಲಿಕಾರನಿಗೆ....]

ನೆರೆ ಮತ್ತು ಬರ

ಪ್ರವಾಹದಿಂದಾಗಿ ಹಾನಿ ಇದ್ದಕ್ಕಿದ್ದಂತೆ ನಡೆಯುವ ಒಂದು ಘಟನೆಯಾದರೂ ಕೂಡಾ ಅದು ತಾತ್ಕಾಲಿಕ ಇದ್ದಕ್ಕಿದ್ದಂತೆ ಏರಿಬಂದ ನೀರು ನೆಲದ ಮೇಲೆ ಹರಿದು ಮನೆಗಳನ್ನು ಮುಳುಗಿಸಿ ಬಿಡುತ್ತದೆ. ಆದರೂ ಕೆಲವೇ ದಿನಗಳಲ್ಲಿ ನೀರು ಇಳಿದುಹೋದ ತಕ್ಷಣ ಪುನರ್ರಚನೆಯ, ಪುನರ್ವಸತಿಯ ಪ್ರಕ್ರಿಯೇ ಆರಂಭಿಸುವುದು ಸಾಧ್ಯ. ಅಲ್ಲದೆ ಪ್ರವಾಹದ ನಂತರ ಜಮೀನು ಮತ್ತಷ್ಟು ಫಲವತ್ತಾಗುತ್ತದೆ. ಮುಂದಿನ ಹಿಂಗಾರು ಬೆಳೆಗೆ ನೀರನ್ನು ಕಾಯ್ದಿಡಲು ಸಾಧ್ಯ. ಇದರಿಂದ ಉತ್ತಮ ಬೆಳೆಯೂ ಬರುತ್ತದೆ. ಇನ್ನೂ ಗಮನಾರ್ಹ ವಿಷಯವೆಂದರೆ ಸಾಮಾನ್ಯವಾಗಿ ಜನ ಪ್ರವಾಹ ಪೀಡಿತರಬಗ್ಗೆ ಸಹಾನುಭೂತಿ ತೋರಿಸುತ್ತಾರೆ ಮುಳುಗುತ್ತಿರುವವರನ್ನು ರಕ್ಷಿಸಲು ಕೈ ನೀಡುವ ಜನ ಬಹಳ. ಪರಿಹಾರ ಕೆಲಸದ ಆಗತ್ಯ ಜನರಿಗೆ ಸುಲಭವಾಗಿ ಅರಿವಾಗುತ್ತದೆ. ಆದರೆ ಬರ ಉಂಟು ಮಾಡುವ ಸ್ಥಿತಿ ತೀರಾ ಭಿನ್ನವಾದದು, ಪ್ರತಿಕೂಲವಾದದು. ಮೊದಲನೆದಾಗಿ, ಬರದ ದುಷ್ಪರಿಣಾಮ ದೀರ್ಘಕಾಲದವರೆಗೆ ಇರುತ್ತದೆ. ತಿಂಗಳಾನುಗಟ್ಟಲೆ ಅದು ಗ್ರಾಮಾಂತರ ಕೃಷಿ ಸಮಾಜದ ಅಡಿಪಾಯವನ್ನು ಕ್ರಮೇಣವಾಗಿ ಕಣ್ಣಿಗೆ ಕಾಣದ ರೀತಿಯಲ್ಲಿ ನಾಶಗೊಳಿಸುತ್ತದೆ. ಗ್ರಾಮೀಣ ಜನತೆಯ ಪರಿಸ್ಥಿತಿ ಹದಗೆಡುತ್ತಾ ಹೋಗುತ್ತದೆ, ಕುಟುಂಬಗಳು ಒಂದೊಂದಾಗಿ ನಿರ್ಗತಿಕವಾಗುತ್ತವೆ. ಕೊನೆಗೆ ಪ್ರತಿಯೊಬ್ಬನೂ ತನ್ನಲ್ಲಿ ಇದ್ದುದೆಲ್ಲವನ್ನೂ ಮಾರಿಕೊಳ್ಳಬೇಕಾಗುತ್ತದೆ

ಬರಗಾಲ ಪರಿಹಾರದ ರಾಜಕೀಯ ಅರ್ಥಶಾಸ್ತ್ರ

[ಈ ಹಿಂದೆ "ಬರಗಾಲದ ರಾಜಕೀಯ ಅರ್ಥಶಾಸ್ತ್ರ" ವನ್ನು "ಐಕ್ಯರಂಗ"ದ ಜ. 19ರ ಸಂಚಿಕೆಯಲ್ಲಿ ಓದಿದ್ದೀರಿ. ಈ ಸಂಚಿಕೆಯ ಬರಗಾಲದ ಸಮೀಕ್ಷೆಯೊಡನೆ ಬರಗಾಲದ ಪರಿಹಾರದ ರಾಜಕೀಯ ಅರ್ಥಶಾಸ್ತ್ರವನ್ನು ಓದಿ]

ದೇಶದ ವಿವಿಧ ರಾಜ್ಯಗಳಲ್ಲಿ ಬರಗಾಲದ ಪರಿಸ್ಥಿತಿ

ಈ ವರ್ಷ ಕರ್ನಾಟಕವೂ ಸೇರಿದಂತೆ ಭಾರತದ ಏಳು ರಾಜ್ಯಗಳಲ್ಲಿ 10 ಕೋಟಿ ಜನ ಬರಗಾಲದ ದುರ್ಭರತೆಗೆ ಒಳಗಾಗಿದ್ದಾರೆ.

ರಾಜಸ್ಥಾನ

ಈ ರಾಜ್ಯದ 26 ಜಿಲ್ಲೆಗಳಲ್ಲಿ 2ಕೋಟಿ ಜನ ಬರ ಪೀಡಿತರಾಗಿದ್ದಾರೆ. ಕಳೆದ ಏಳು ವರ್ಷಗಳಿಂದ ಈ ರಾಜ್ಯಬರಗಾಲದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದೆ ಶೇಕಡಾ ಎಪ್ಪತ್ತರಷ್ಟು ಬೆಳೆ ನಷ್ಟಗೊಂಡಿದೆ ರಾಜ್ಯದಿಂದ ಹೊರಗೆ ವ್ಯಾಪಕವಲಸೆ ನಡೆಯುತ್ತಿದೆ.

ಮಹಾರಾಷ್ಟ್ರ

17 ಜಿಲ್ಲೆಗಳಲ್ಲಿ 1 ಕೋಟಿ ಜನಗಳನ್ನು ತಬ್ಬಿರುವ ಬರಗಾಲ ಇದುವರೆಗೆ ಸುಮಾರು 400 ಕೋಟಿ ರೂಪಾಯಿಗಳಷ್ಟು ಬೆಳೆಯನ್ನು ನಾಶಗೊಳಿಸಿದೆ. ಧುಳೆ ಜಿಲ್ಲೆಯೊಂದರಲ್ಲೇ ಕಳೆದ ತಿಂಗಳು 25 ಸಾವಿರ ದನ-ಕರುಗಳು ಅಸು ನೀಗಿದವಂತೆ.

ಒರಿಸ್ಸಾ

ಕಾಲಹಂದಿ, ಖೋರಾಪುಚ್ ಹಾಗೂ ಫುಲ್‌ಬನೀ ಸತತವಾಗಿ ಬರಗಾಲದಿಂದ ನರಳುತ್ತಿರುವ ಜಿಲ್ಲೆಗಳು. ಇಲ್ಲಿಯವಾಸಿಗಳು-ಮುಖ್ಯತಃ ಆದಿವಾಸಿಗಳು ಪ್ರಾಣಿ ಸಮಾನ ಜೀವನ ನಡೆಸಬೇಕಾಗಿ ಬಂದಿದೆಯಂತೆ ಈಗಾಗಲೇ 500 ಜನ ಹಸಿವಿನಿಂದ ಸತ್ತಿರಬಹುದೆಂದು ಅನಧಿಕೃತವಾಗಿ ಶಂಕಿಸಲಾಗಿದೆ. ಪ್ರಧಾನ ಮಂತ್ರಿಗಳ ಬಹು ಪ್ರಚಾರಿತ ಭೇಟಿಯೂ ಪರಿಸ್ಥಿತಿಯನ್ನು ಯಾವುದೇ ರೀತಿಯಲ್ಲಿ ಸುಧಾರಿಸಲಿಲ್ಲ.

ಮಧ್ಯಪ್ರದೇಶ

45ರಲ್ಲಿ 27 ಜಿಲ್ಲೆಗಳು, 106 ಪಟ್ಟಣಗಳು 5932 ಹಳ್ಳಿಗಳು ಬರಗಾಲ ಎದುರಿಸುತ್ತಿವೆ.

ಗುಜರಾತ್

17 ಜಿಲ್ಲೆಗಳ ಒಂದು ಕೋಟಿ ಎಂಭತ್ತು ಲಕ್ಷ ಜನ ಬರಪೀಡಿತರಾಗಿದ್ದಾರೆ.

ಆಂಧ್ರಪ್ರದೇಶ

860 ಕೋಟಿ ರೂಗಳ ಬೆಳೆ ಹಾನಿಯಾಗಿದೆ.

ಬರಗಾಲ ಪರಿಹಾರದಲ್ಲಿ ಬರಗಾಲ ಪೀಡಿತ ಜನ ಸಮುದಾಯಕ್ಕೆ, ದುಡಿಯುವ ಜನರಿಗೆ ಅವರ ಸಂಕಟವನ್ನು ತಗ್ಗಿಸುವ ತುರ್ತು ಪರಿಹಾರಗಳು ಒಂದು ಮುಖವಾದರೆ, ಅದರ ಜೊತೆ ಜೊತೆಗೇ ಮುಂದೆ ಬರಗಾಲ ಎಂದೆಂದೂ ಪುನರಾವೃತ್ತಿಯಾಗದಂತೆ ನಿವಾರಿಸುವ ಖಾಯಂ ಪರಿಹಾರ ಕ್ರಮಗಳು ಮತ್ತೊಂದು ಮುಖ.

ತುರ್ತುಪರಿಹಾರ ಕ್ರಮಗಳು

ಬರಗಾಲವೆಂಬುದು ಗ್ರಾಮೀಣ ಆರ್ಥಿಕತೆಯ ಬೇರನ್ನೇ ಹಿಡಿದಲುಗಿಸಿ ಆ ಮೂಲಕ ಇಡೀ ದೇಶದ ಮೇಲೆ ಪರಿಣಾಮ ಬೀರುತ್ತದೆ. ಈ ಪರಿಣಾಮಗಳನ್ನು ತಡೆಯಲೊಂದೇ ಮಾರ್ಗ. ಅದು ಬರ ಪೀಡಿತ ಪ್ರದೇಶದ ಜನ ತಮ್ಮ ಮನೆ ಮಾರುಗಳನ್ನು ತೊರೆದು ನಗರಗಳತ್ತ ಮುಖಮಾಡಿ ವಲಸೆ ಹೋಗದಂತೆ ತಡೆಯುವುದು ಈ ವಲಸೆಯೆಂಬುದೇಇಲ್ಲದಿದ್ದರೆ ಗ್ರಾಮೀಣ ಆರ್ಥಿಕದ ಸ್ಥಿತಿ ಬಹಳ ಹದಗೆಡದೇ ಸುಸಂಗತವಾಗಿ ಉಳಿಯುವುದು, ಮುಂದೆ ಮಳೆ ಬಂದ ತಕ್ಷಣವೇ ಶೀಘ್ರವಾಗಿ ಚೇತರಿಸಿಕೊಳ್ಳುವುದು ಸಾಧ್ಯ.

ವಲಸೆ ಹೋಗುವುದನ್ನು ತಡೆಯಲು ಅತ್ಯಗತ್ಯವಾದದ್ದು ಕೆಲಸವಿಲ್ಲದವರಿಗೆಲ್ಲಾ ಸ್ಥಳದಲ್ಲಿಯೇ ಕೆಲಸ, ಅವರ ದುಡಿಮೆಗೆ ತಕ್ಕ ಬೆಲೆಯಲ್ಲಿ ಆಹಾರ, ಮತ್ತಿತರ ಅವಶ್ಯಕ ವಸ್ತುಗಳ ಅಗ್ಗದ ಯಥೇಚ್ಛ ಪೂರೈಕೆ, ಕುಡಿಯುವ ನೀರು ಹಾಗೂ ದನಗಳಿಗೆ ಮೇವು, ಉದ್ಯೋಗ ಮಾಡಲಾರದ ವೃದ್ಧ, ರೋಗಪೀಡಿತ, ಬಾಣಂತಿ, ಗರ್ಭಿಣಿ ಮೊದಲಾದವರಿಗೆ, ಮಕ್ಕಳಿಗೆ ಉಚಿತವಾದ, ಪೋಷಕಾಂಶಗಳನ್ನುಳ್ಳ ಆಹಾರವನ್ನು ಶಾಲೆ, ಆಸ್ಪತ್ರೆಗಳ ಮೂಲಕ, ಉಚಿತ ಆಹಾರ ಧಾನ್ಯ ಹಂಚಿಕೆಯ ಮೂಲಕ ಒದಗಿಸುವುದು. ಇದು ಮಾತ್ರವೇ ವಲಸೆಯನ್ನು ತಡೆಗಟ್ಟಬಲ್ಲುದು.

ರಾಮಕೃಷ್ಣ ಹೆಗ್ಗಡೆ ಹಾಗೂ ಬರ ಪರಿಹಾರ

ಹೀಗೆ ವಲಸೆ ಹೋಗುವುದನ್ನು ತಡೆದರೆ ರಾಜ್ಯ ಆರ್ಥಿಕಕ್ಕೆ ಆಗುವ ಹಾನಿಯನ್ನೂ ಕಡಿಮೆಗೊಳಿಸಬಹುದು ಎಂಬುದು ತಿಳಿದಿದ್ದರೂ ರಾಮಕೃಷ್ಣ ಹೆಗ್ಗಡೆಯವರ ಸರಕಾರವೇಕೆ ಈ ಕೆಲಸ ಮಾಡುವುದಿಲ್ಲ. ಲಕ್ಷಾಂತರ ಕುಟುಂಬಗಳು ತಮ್ಮ ಊರು,ಜಿಲ್ಲೆಗಳಿಂದ ನಗರಗಳಿಗೆ, ನೀರಾವರಿ ಪ್ರದೇಶಗಳಿಗೆ ಹೊರ ರಾಜ್ಯಗಳಿಗೆ, ತಮ್ಮ ಮನೆ ಮಠಗಳನ್ನು ಒತ್ತೆಯಿಟ್ಟು, ಮಾರಿ ಕಣ್ಣೀರು ಕರೆಯುತ್ತಾ ಸಾಗುವುದನ್ನು ಕಂಡೂ ಏಕೆ ಕಣ್ಣು ಮುಚ್ಚಿ ಕುಳಿತಿದ್ದಾರೆ ?

ರಾಜ್ಯದ ಜನತಾ ಸರ್ಕಾರ ಈ ಕೆಲಸವನ್ನು ನಿರ್ವಹಿಸಬೇಕಾದರೆ ಅತ್ಯವಶ್ಯವಾದುದು ಬರಗಾಲ ಪರಿಹಾರಕ್ಕೆ ಸಾಕಷ್ಟು ಹಣ ಮೀಸಲಿಡುವುದು, ಬರಗಾಲದ ಸೂಚನೆಗಳು ಸ್ವಲ್ಪವೇ ಕಂಡರೂ ತುರ್ತು ಕ್ರಮ ಕೈಗೊಳ್ಳುವುದು, ಜೊತೆಗೆ ಆಹಾರ ಧಾನ್ಯಗಳ ಸಂಗ್ರಹದ ಮೇಲೆ, ವಿತರಣೆಯ ಮೇಲೆ ಪೂರ್ಣ ಹತೋಟಿ ಸಾಧಿಸಿ, ಅಕ್ರಮ ದಾಸ್ತಾನುದಾರರನ್ನು ಕಾಳಸಂತೆ, ಕೋರರನ್ನು ಮಣ್ಣು ಮಣ್ಣು ಮುಕ್ಕಿಸುವುದು ಬರಗಾಲ ಪರಿಹಾರ ಕಾರ್ಯದಲ್ಲಿ, ಆಹಾರ ಸಾಮಗ್ರಿಗಳ ವಿತರಣೆಯಲ್ಲಿ ಕಾಳ ಸಂತೆಯ ಹತೋಟಿಯಲ್ಲಿ ಜನ ಸಮುದಾಯದ ಸಂಘಟನೆಗಳ ರೈತ ಸಂಘಗಳು, ರಾಜಕೀಯ ಪಕ್ಷಗಳ ನೆರವನ್ನು ಪಡೆದು ಅತಿಶೀಘ್ರದಲ್ಲಿ ಅತ್ಯಂತ ಉಪಯುಕ್ತವಾದ ಕ್ರಮವನ್ನು ಸೋರಿಕೆಯಿಲ್ಲದೆಯೇ ಕೈಗೊಳ್ಳುವುದು.

ಬರಪರಿಹಾರಕ್ಕೆ ದೇಣಿಗೆ ಸಿ. ಐ. ಟಿ. ಯು. ಕರೆ

ಕರ್ನಾಟಕ ರಾಜ್ಯದಲ್ಲಿರುವ ಭೀಕರವಾದ ಬರಗಾಲದ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ, ಸಿ. ಐ. ಟಿ. ಯು. ನೇತೃತ್ವದ ಕಾರ್ಮಿಕ ಸಂಘಗಳ ಎಲ್ಲಾ ಸದಸ್ಯರೂ ಫೆಬ್ರವರಿ ತಿಂಗಳ ಸಂಬಳದಿಂದ ಒಂದು ದಿನದ ಸಂಬಳವನ್ನು ಬರ ಪರಿಹಾರಕ್ಕೆ ದೇಣಿಗೆಯಾಗಿ ಕೊಡಬೇಕೆಂದೂ,ಕಾರ್ಮಿಕ ಸಂಘಗಳು ಸಂಗ್ರಹಿಸುವ ಈ ಹಣವನ್ನು ಬರ ಪರಿಹಾರ ಕಾರ್ಯದಲ್ಲಿ ಕೂಡಲೇ ಉಪಯೋಗವಾಗುವಂತೆ, ಈ ಕೆಲಸದಲ್ಲಿ ಈಗಾಗಲೇ ನಿರತವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಗಳಿಗೆ ಒಪ್ಪಿಸಬೇಕೆಂದೂ ಸಿ.ಐ.ಟಿ.ಯು ರಾಜ್ಯ ಮಂಡಳಿ ಕರೆ ನೀಡಿದೆ.

ಹಣದ್ದೇ ಮುಖ್ಯಪ್ರಶ್ನೆ. ಅಸಂಖ್ಯ ಜನರಿಗೆ ಉದ್ಯೋಗ ಒದಗಿಸುವ ಯಾವುದೇ ತುರ್ತು ಯಾ ಖಾಯಂ ಕಾಮಗಾರಿಗಳಿಗೆ, ಅಪಾರ ಹಣಬೇಕು ಇಷ್ಟೊಂದು ಹಣದ ಬಲ ಯಾವುದೇ ರಾಜ್ಯ ಸರಕಾರಕ್ಕೆ ಇಲ್ಲ ದಿನದಿನಕ್ಕೂ ಆರ್ಥಿಕ ಅಧಿಕಾರವನ್ನು, ಕೇಂದ್ರೀಕರಿಸಿಕೊಂಡು ತನ್ನ ಬಿಗಿ ಮುಷ್ಟಿಯಲ್ಲಿ ಇಟ್ಟುಕೊಂಡಿರುವ ಕೇಂದ್ರ ಸರಕಾರದ ನೀತಿಯ ಫಲ ಇದು.

ಚೌಕಾಸಿಯ ಸಾಧನವಾಗಿ ಬರಗಾಲ

ಕೇಂದ್ರದಿಂದ ಹೆಚ್ಚು ಹೆಚ್ಚು ಹಣವನ್ನು ಪಡೆದು ಬರಗಾಲ ಪರಿಹಾರ ಕಾಮಗಾರಿ ಕೈಗೊಳ್ಳುವುದರ ಕಡೆ ಗಮನ ನೀಡುವ ಬದಲು, ಇದಕ್ಕೆ ಆತಂಕವಾದ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ ಬದಲು, ರಾಜ್ಯದ ಬಂಡವಾಳಶಾಹಿ ಭೂಮಾಲಕ ವರ್ಗಗಳ ಹಿತ ರಕ್ಷಣೆ ಮಾಡುವ ರಾಜ್ಯ ಯೋಜನೆಗೆ ಹೆಚ್ಚು ಹಣ ಪಡೆಯುವ ಚೌಕಾಸಿ ಸಾಧನವಾಗಿ ಬರಗಾಲವನ್ನು ಉಪಯೋಗಿಸಿಕೊಂಡಿತು ಹೆಗ್ಗಡೆ ಸರಕಾರ.

ರಾಜೀವ ಗಾಂಧಿಯವರನ್ನು, ಅವರ ಆರ್ಥಿಕ ನೀತಿಯನ್ನು ಹೊಗಳಿ ಹಾಡಿ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಕೀರ್ತಿಸಿ, ನಂತರ ಬರಗಾಲಕ್ಕೆ ಕೇಂದ್ರ ಸರಕಾರ ಎಲ್ಲಾ ಸಹಾಯವನ್ನೂ ನೀಡಿದೆ ಎಂದದ್ದು ಒಂದು ಹಂತ. ಹಾಗೆಯೇ ಕೆಲವೇ ವಾರಗಳ ನಂತರ ರಾಜ್ಯದ ವಾರ್ಷಿಕ ಯೋಜನೆಯ ಬಗ್ಗೆ ಯೋಜನಾ ಆಯೋಗ ಚರ್ಚೆಯನ್ನು ಕೈಗೆತ್ತಿಕೊಳ್ಳುವ ಸಮಯ ಬಂದಾಗ ಬರಗಾಲಕ್ಕೆ ಕೇಂದ್ರ ಸರಕಾರ ಏನೂ ಸಹಾಯ ಮಾಡಲಿಲ್ಲ, ಬರಗಾಲ ಭೀಕರವಾಗಿದೆ, ನಾವು ಓವರ್ ಡ್ರಾಫ್ಟ್ ಪಡೆಯಲು ಆರಂಭಿಸುವುದು ಅನಿವಾರ್ಯ ಎಂದು ಬೊಬ್ಬೆ ಹಾಕಿದ್ದು ಎರಡನೆ ಹಂತ ದೆಹಲಿಗೆ ವಿಮಾನ ಹತ್ತುವ ಮೊದಲು.

ಮತ್ತೆ ದೆಹಲಿಯಿಂದ ಮರಳಿ ರಾಜ್ಯದ ಯೋಜನೆಯನ್ನು ಪೂರೈಸಿಕೊಂಡು ಬಂದ ಕೂಡಲೇ ಕೇಂದ್ರ ಸರಕಾರ ತುರ್ತು ಕ್ರಮ ಕೈಗೊಂಡಿದೆ, ತಕ್ಷಣವೇ ಸಚಿವ ಬೂಟಾ ಸಿಂಗರನ್ನು ಕಳುಹಿಸುತ್ತಿದೆ ಎಂದೆಲ್ಲಾ ಹೊಗಳಿದ್ದು ಮೂರನೆಯ ಹಂತ. ಇದು ಪೂರ್ಣವಾಗಿ ಹೆಗ್ಗಡೆ ಸರಕಾರದ ಹೂಗು ಯ್ಯಾಲೆ ನೀತಿಯನ್ನು ಒತ್ತಡ ತಂತ್ರದಿಂದ ಕೇಂದ್ರದೊಡನೆ ರಾಜೀ ಮಾಡಿಕೊಳ್ಳುವ, ಕೇಂದ್ರದೊಡನೆ ಹೋರಾಟವನ್ನು ಕೈಬಿಟ್ಟ ಮನೋಭಾವವನ್ನು ತೋರಿಸುತ್ತದೆ.

ಬರಗಾಲ, ರಾಜೀವಗಾಂಧಿ, ಹಾಗೂ ವಿಶ್ವಬ್ಯಾಂಕ್, ಹಿಂದಿನಿಂದ ಕೇಂದ್ರ ಸರ್ಕಾರ ಅನುಸರಿಸಿಕೊಂಡು

(8ನೇ ಪುಟ ನೋಡಿ)

ಕರ್ನಾಟಕ ಪ್ರಾಂತ ರೈತ ಸಂಘದ ಕರೆ

ಮಾರ್ಚ್ 17 ರಂದು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ

ಕರ್ನಾಟಕದ ವಿವಿಧ ಭಾಗಗಳಲ್ಲಿ ಬರಗಾಲ ಬಂದಪ್ಪಳಿಸಿರುವ ಬಗ್ಗೆ, ಜನಸಮುದಾಯದ ಸಂಕಷ್ಟದ ಬಗ್ಗೆ ಜನತಾ ಸರಕಾರ ಪರಿಹಾರವನ್ನು ಕೈಗೊಂಡ ರೀತಿ ಪ್ರಮಾಣದ ಬಗ್ಗೆ ಹಾಗೂ ಹೆಚ್ಚಿನ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ, ನಡೆಯುತ್ತಿರುವ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ತಡೆಗಟ್ಟುವುದಕ್ಕಾಗಿ, ಗೋಶಾಲೆಗಳಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘದ ವಿವಿಧ ಘಟಕಗಳು ನಡೆಸಿದ ಹೋರಾಟದ ಬಗ್ಗೆ ಸಂಘದ ರಾಜ್ಯ ಸಮಿತಿ ವರದಿಯನ್ನು ಪಡೆಯಿತು ಹಾಗೂ ಬರಗಾಲದ ಇಂದಿನ ಪರಿಸ್ಥಿತಿಯನ್ನು ವಿಮರ್ಶಿಸಿತು 146 ತಾಲ್ಲೂಕುಗಳಲ್ಲಿ, 19 ಸಾವಿರಕ್ಕೂ ಹೆಚ್ಚು ಹಳ್ಳಿಗಳನ್ನು ಬಾಧಿಸುತ್ತಿರುವ, ಮೂರು ವರ್ಷಗಳಿಂದ ನಿರಂತರವಾಗಿ ಕಾಡಿಸುತ್ತಿರುವ ಬರಗಾಲದ ಮುಂದೆ ಜನತಾ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳು ಕೇವಲ ಕೆಲವೇ ಜನರಿಗೆ ಮುಟ್ಟುತ್ತಿವೆಯೆಂದು ಅದರಲ್ಲಿಯೂ ಶಾಸಕರ, ಜನತಾ ಪಕ್ಷದ ಬೆಂಬಲಿಗರಿಗೆ ಮಾತ್ರ ಆದ್ಯತೆ ದೊರೆಯುತ್ತಿದೆಯೆಂದು ಪ್ರಾಂತ ರೈತ ಸಂಘ ಅಭಿಪ್ರಾಯಪಟ್ಟಿತು

ಈ ನಿರ್ಲಕ್ಷ್ಯದ ಭ್ರಷ್ಟಾಚಾರದ ವಿರುದ್ಧ ರೈತ ಸಮುದಾಯವನ್ನು ಹೋರಾಟಕ್ಕಿಳಿಸಲು, ಜನತಾ ಸರಕಾರ ಹೊಣೆಗಾರಿಕೆಯಿಂದ ವ್ಯಾಪಕವಾದ ಪರಿಹಾರ ಕ್ರಮ ಕೈಗೊಳ್ಳುವಂತೆ ಹಾಗೂ ಅಧಿಕಾರಿಗಳ ಭ್ರಷ್ಟಾಚಾರವನ್ನು ತಪ್ಪಿಸಲು ಸರ್ವ ಪಕ್ಷ ಉಸ್ತುವಾರಿ ಸಮಿತಿಯನ್ನು ನೇಮಿಸಲು ಒತ್ತಾಯಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 17-3-83 ರಂದು ಪ್ರತಿಭಟನೆ, ಧರಣಿ ಸತ್ಯಾಗ್ರಹವನ್ನು ಕೈಗೊಳ್ಳುವಂತೆ ರಾಜ್ಯ ಸಮಿತಿ ತೀರ್ಮಾನಿಸಿತೆ

ಉರಿಸಿ ಕೊಲ್ಲಲು ಬಾರದೆ ?

ಯಾತಕೆ ಮಳೆ ಹೋದವೋ-ಶಿವಶಿವ
ಲೋಕ ತಲ್ಲಣಿಸುತಾವೋ
ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು
ಉರಿಸಿ ಕೊಲ್ಲಲು ಬಾರದೆ ?
ಹೊಟ್ಟೆಗೆ ಅನ್ನ ಇಲ್ಲವೇಲೆ
ನಡೆದಾರೆ ಜೋಲಿ ಹೊಡೆಯುತಲೇ
ಪಟ್ಟದಾನೆಯಂಥ ಸ್ತ್ರೀಯರು ಸೊರಗಿ
ಸೀರೆ ನಿಲ್ಲೋದಿಲ್ಲ ಸೊಂಟದಲಿ
ಹಸುಗೂಸು ಹಸಿವಿಗೆ ತಾಳದಲೆ
ಅಳುತಾನೆ ರೊಟ್ಟಿ ಕೇಳುತಲೆ
ಹಡೆದ ಬಾಣಂತಿಗೆ ಅನ್ನವಿಲ್ಲದಲೆ
ಏರುತಾವೆ ಮುಂಗೈಗೆ ಬಳೆ

ಕರ್ನಾಟಕವನ್ನು ಕಾಡುತ್ತಿರುವ ಬರಗಾಲದ ಬವಣೆ - ಒಂದು ಸಮೀಕ್ಷೆ

ಕರ್ನಾಟಕದ ಗ್ರಾಮೀಣ ಜನತೆ ಅನುಭವಿಸುತ್ತಿರುವ ಬರಗಾಲದ ಬವಣೆಯ ಒಂದು ಸಮೀಕ್ಷದಚಿತ್ರ ನೀಡುವುದಕ್ಕಾಗಿ ಬಾಂಬೆಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಹಳೇ ಮೈಸೂರಿನ ಕ್ಷಾಮಕ್ಕೆ ಪದೇ ಪದೇ ತುತ್ತಾಗುವ ಮೂರು ಜಿಲ್ಲೆಗಳನ್ನು, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರ ನೆರವಿನಿಂದ "ಐಕ್ಯರಂಗ" ಸಮೀಕ್ಷೆ ನಡೆಸಿದೆ ಉಳಿದ ಜಿಲ್ಲೆಗಳ ವರದಿಗಳನ್ನೂ ಬಂದಂತೆಲ್ಲಾ ಪ್ರಕಟಿಸಲಾಗುವುದು. ಮಾನವೀಯ, ಹೃದಯ ಮಿಡಿಯುವ ವಿವರಗಳನ್ನುಳ್ಳ ವರದಿಗಳನ್ನು, ಬರಗಾಲ ತೀವ್ರವಾಗುತ್ತಾ ಹೋಗುವ ಮುಂದಿನ ದಿನಗಳಲ್ಲಿ ಕಳುಹಿಸಬೇಕೆಂದು ಐಕ್ಯರಂಗ ವಿನಂತಿಸುತ್ತದೆ.

— ಸಂಪಾದಕ

"ಯಾತಕ್ಕೆ ಮಳೆ ಹೋದವೋ.... ಲೋಕತಲ್ಲಣಿಸುತಾವೋ" ಎಂಬ ಜನಪದಕಾವ್ಯದಲ್ಲಿ ಬರಗಾಲದ ಯಾತನೆಯನ್ನನುಭವಿಸಿದ ಜನರ ಬಾಯಿಂದ ಶತಶತಮಾನಗಳಿಂದ ಮೂಡಿಬಂದಿರುವ ನಿಟ್ಟುಸಿರು ಇಂದೂ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದಲೂ ಕೇಳಿ ಬರುತ್ತಿದೆ. ಕತ್ತೆತ್ತಿ ಆಕಾಶದತ್ತ ನೋಡಿದಾಗಲೆಲ್ಲ ಕಾಣುತ್ತಿದ್ದ ಒಡಲು ತುಂಬಿದ ಬಸಿರು ಮೋಡಗಳು ಇಲ್ಲವಾಗಿ ನೀಲಿ ಆಕಾಶ ಕಣ್ಣಿಗೆ ರಾಚುತ್ತಿದೆ. ಹಿಂದೆಲ್ಲಾ ಒಂದೇ ಸಮನೆ ಜಡಿದು ನಡುಕ ಹುಟ್ಟಿಸುತ್ತಿದ್ದ ಮಳೆ ಕಾಣದಾಗಿದೆ. ಎಡಬಿಡದೆ ಸುರಿದು ಹಿಡಿದ ಮಳೆ ವಾರವಾದರೂ ಬಿಡದಿದ್ದಾಗ "ಬಾನು ಹ.ಟ್ಟು ಹೋಗ" ಎಂದು ಶಪಿಸುತ್ತಿದ್ದ ಜನರ ಬಾಯಿ ಬಂದಾಗಿದೆ. "ಯಾರು ಹೋಗಲಿ, ಯಾರು ಬದುಕಲಿ ಮಳೆಗಾಲ ನಿಲ್ಲುತ್ತದೆಯ ?" "ಜೂನ್ ತಿಂಗಳಲ್ಲಿ ಛತ್ರಿ ಒದ್ದೆಯಾದರೆ ಒಣಗುವುದು ಸೆಪ್ಟಂಬರಿನಲ್ಲೇ," "ಹೆಂಡತಿ ಮರೆತರೂ ಆಯಿತು, ಆದರೆ ಛತ್ರಿ ಮರೆಯುವುದಿಲ್ಲ" ಎಂಬ ನಾಣ್ಣುಡಿಗಳೆಲ್ಲಾ ಆಕಾಶದಲ್ಲಿ ಮಳೆಸುರಿಸುವ ಮೋಡಗಳಿಲ್ಲದೆ ಅಪಹಾಸ್ಯಕ್ಕೀಡಾಗಿವೆ.

ಜನ, ಜಾನುವಾರುಗಳು

ಬಳ್ಳಾರಿಯ ಸೊಂಡೂರಿನಲ್ಲಿ ವಲಸೆ ಹೋಗುತ್ತಿದ್ದ ಜಾನುವಾರುಗಳು ದಾರಿಯಲ್ಲಿಯೇ ಸತ್ತು ಬೀಳುತ್ತಿವೆ. ನಡೆಯಲಾಗದೆ ಉಳಿದ ಜಾನುವಾರುಗಳು ಮೂಳೆ ಚಕ್ಕಳವಾಗುತ್ತಿವೆ. ಒಡಲಿಗೆ ತಂಪನೆ ಹಾಲು ನೀಡುತ್ತಿದ್ದ ಗೋವುಗಳು ಎದೆ ಬತ್ತಿಸಿಕೊಂಡು ಎರಡು ಹಿಡಿ ಮೇವಿಗಾಗಿ ನಿಟ್ಟುಸಿರಿಡುತ್ತಿವೆ. ಬೀದಿ ಬೀದಿಗಳಲ್ಲಿ ಇಂದು ಕಂಡ ಜಾನುವಾರಗಳು ಮಾರನೆಯ ದಿನ ಕಸಾಯಿಖಾನೆಯ ಗೋಡೆಗಳಲ್ಲಿ ನೇತು ಹಾಕಿರುವ ಚರ್ಮಗಳಾಗಿ ಬದಲಾಗಿವೆ. ಕಸಾಯಿಖಾನೆಗೆ ತನ್ನ ಪ್ರೀತಿಯ ಗೋವುಗಳನ್ನು ನೋಡಲಾಗದೆ ನೂರಾರು ಮೈಲಿಗಳ ಆಚೆ ತಮ್ಮ ಜಾನುವಾರುಗಳನ್ನು ಬಿಟ್ಟು ಬಂದರೂ ತನ್ನ ಒಡೆಯನ ಮನೆಯನ್ನು ಗುರುತಿಸುತ್ತಾ ಕಷ್ಟದಿಂದ ನಡೆಯುತ್ತಾ ಮನೆಯ ಮುಂದೆ ಬಂದು ನಿಂತದ್ದನ್ನು ಕಂಡು ಎರಡು ಹಿಡಿ ಹುಲ್ಲು ನೀಡಲಾಗದ ತನ್ನ ಅಸಹಾಯಕತೆಗೆ ತಡೆಯಲಾರದೆ ನೇಣುಹಾಕಿಕೊಂಡ ರೈತನ ಬಗ್ಗೆ ಪತ್ರಿಕೆಗಳೆಲ್ಲವೂ ವರದಿಮಾಡಿವೆ. ಪ್ರತಿದಿನವೂ ಉತ್ತರ ಕರ್ನಾಟಕದ ಕಸಾಯಿಖಾನೆಗಳಲ್ಲಿ ನೂರಾರುಮೂಗುದಾರಗಳು ಸಿಗುತ್ತಿವೆ. ಜಿಲ್ಲೆಯಿಂದ ಜಿಲ್ಲೆಗೆ ಗುಳೆ ಹೋಗುವ ದೃಶ್ಯಗಳು, ಹಿರಿ ವಯಸ್ಸಿನವರನ್ನು ನಡೆಸಲಾರದೆ ಅವರನ್ನು ಅಗಲುವಾಗಿನ ಮಕ್ಕಳ ಆಕ್ರಂದನ ಕೋಲಾರ ಜಿಲ್ಲೆಯಲ್ಲಿ ಪ್ರತಿದಿನ ನಡೆಯುವ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ. ಬಿಜಾಪುರದ ಸತತ ತೀವ್ರವಾದ ಬರಗಾಲ "ಡೋಣಿ ಬೆಳೆದರೆ ಓಣಿ ತುಂಬಾ ಜೋಳ" ಎಂಬ ಗಾದೆಯನ್ನೂ ಸಹ ಸುಳ್ಳು ಮಾಡಿಬಿಟ್ಟಿದೆ.

ಈ ಸಂದರ್ಭದಲ್ಲಿ ಕರ್ನಾಟಕಪ್ರಾಂತ ರೈತ ಸಂಘ ಎಲ್ಲಾ ಜಿಲ್ಲೆಗಳಲ್ಲೂ ಬರಪರಿಹಾರಕ್ಕಾಗಿ ತೀವ್ರವಾದ ಕಾರ್ಯಕ್ರಮಗಳನ್ನೂ ಹೋರಾಟಗಳನ್ನು ಹಮ್ಮಿಕೊಂಡಿದೆ. ರಾಜ್ಯ ಜನತಾ ಸರ್ಕಾರವನ್ನು ಬರಪರಿಹಾರಕ್ಕಾಗಿ ಒತ್ತಾಯಿಸಿದೆ. ಸೂರೇ ಇಲ್ಲದ ಗೋಶಾಲೆಗಳು, ಇನ್ನೂ ತಲುಪದಿರುವ ಮೇವುಗಳ ಬಗೆಗಿನ ನಿರ್ಲಕ್ಷ್ಯದ ವಿರುದ್ಧ ಹೋರಾಟ ನಡೆಸುತ್ತಿದೆ. ಕೇಂದ್ರ ಸರಕಾರ ಬರಗಾಲ ಪರಿಹಾರಕ್ಕಾಗಿ ನೂರು ಕೋಟಿ ರೂಗಳನ್ನು ಯೋಜನೆಯ ಹಣದಲ್ಲಿ ಕಡಿತ ಮಾಡದೆ ಬಿಡುಗಡೆ ಮಾಡಬೇಕು. ಧಾನ್ಯವನ್ನು ಶೇಖರಿಸಲಾಗದೆ ಇಲಿ ಹೆಗ್ಗಣಗಳಿಗೆ ಆಹಾರವಾಗಿರುವ ಕನಿಷ್ಟ 4ರಿಂದ 5ಲಕ್ಷಟನ್ ಧಾನ್ಯವನ್ನು ಬರಗಾಲ ಪೀಡಿತರಿಗೆ ಹಂಚಬೇಕು ರಾಷ್ಟ್ರೀಕೃತ ಬ್ಯಾಂಕುಗಳು ಬರಗಾಲದ ತಾಲ್ಲೂಕುಗಳನ್ನು ದತ್ತುತೆಗೆದುಕೊಂಡು ಎಲ್ಲಾನೆರವನ್ನೂ ನೀಡಬೇಕು. ಬರ ಪರಿಹಾರದ ಹಣ ದುರುಪಯೋಗವಾಗದಂತೆ ಎಲ್ಲಾ ಪಕ್ಷಗಳ ಉಸ್ತುವಾರಿ ಸಮಿತಿ ರಚಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದೆ.

—ಜಿ. ಎನ್. ಮೋಹನ್

ಯಾವಾಗ ಬಂದೆಪ್ಪ ಮಳೆರಾಜ

ಬಣ್ಣದ ಗುಬ್ಯಾರು ಮಳ್ಯರಾಜ ಅವರು
ಮಣ್ಣಾಗಿ ಹೋದರು ಮಳೆರಾಜಾ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳೆರಾಜಾ

ಒಕ್ಕಲ ಗೇರ್ಯಾಗ ಮಳೆರಾಜಾ ಅವರು
ಮಕ್ಕಳ ಮಾರ್ಯಾರ ಮಳೆರಾಜಾ
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತಂತ ತಿರಗ್ಯಾರು ಮಳೆರಾಜಾ

ಸೊಲಗಿ ಹಿಟ್ಟಿನಾಗ ಮಳೆರಾಜಾ ಅವರು
ಸುಣ್ಣನ್ನ ಕೂಡಿಸ್ಯಾರ ಮಳೆರಾಜಾ
ಹಸ್ತು ಬಂದಸ್ಯಾರಿ ಗಬಗಬ ತಿಂದು
ಒದ್ದಾಡಿ ಸತ್ತಾರ ಮಳೆರಾಜಾ

ಗಿದ್ದನ ಅಕ್ಯಾಗ ಮಳೆರಾಜಾ ಅವರು
ಅವುವನ್ನ ಕೂಡಿಸ್ಯಾರ ಮಳೆರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಚ್ಯಾವ ಮಳೆರಾಜಾ

ಗಂಡುಳ್ಳ ಬಾಲ್ಯಾರು ಮಳೆರಾಜಾ ಅವರು
ಬಿಕ್ಷಾಕ ಹೊರಟಾರ ಮಳೆರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ನದ ದಿನ ಬಂದು ಮಳೆರಾಜಾ

ಸ್ವಾತಿಯ ಮಳಿ ಬಂದು ಮಳೆರಾಜಾ ಸುತ್ತ
ದೇಶಾಕ ಆಗ್ಯಾದ ಮಳೆರಾಜಾ
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳೆರಾಜಾ

['ಯಾವಾಗ ಬಂದೆಪ್ಪಾ ಮಳೆರಾಜ' ಎಂಬ ನುಡಿ ಬರಗಾಲ ಪರಿಹಾರ ಕ್ರಮಕ್ಕೂ ಅನ್ವಯಿಸುತ್ತದೆ. ಸರಕಾರ ಪರಿಹಾರ ಕಾಮಗಾರಿಯನ್ನು ಆರಂಭಿಸುವ ವೇಳೆಗೆ ಲಕ್ಷಾಂತರ ಮಂದಿ ಊರು ಬಿಟ್ಟು ಕೆಲಸ ಹುಡುಕುತ್ತಾ ಸಾವಿರಾರು ಮೈಲಿಗಳ ಹಾದಿ ಕ್ರಮಿಸಿರುತ್ತಾರೆ. ಗೋಶಾಲೆಗಳು ಆರಂಭವಾಗುವ ವೇಳೆಗೆ ಹಸು, ಕರು, ಎತ್ತುಗಳು ಕಸಾಯಿಖಾನೆಯಲ್ಲಿ ಚಕ್ಕಳವಾಗಿರುತ್ತವೆ.]

ಬರದ ತವರೂರು ಬಿಜಾಪುರ

—ಎನ್. ಕೆ. ಉಪಾಧ್ಯಾಯ

ಬಿಜಾಪುರ ಜಿಲ್ಲೆ ಬರಗಾಲದ ತವರೂರೆಂದು, ಪ್ರಸಿದ್ಧವಾಗಿದೆ, 1296 ರಿಂದ 1442ರ ವರೆಗೆ "ದುರ್ಗಾದೇವಿಯ ದುಷ್ಕಾಳ"ವೇ ಈ ಜಿಲ್ಲೆಯಲ್ಲಿತ್ತಂತೆ. 1472 ರಿಂದ 73ರವರೆಗೆ ಮೊಗಲರು ಇಲ್ಲಿ ಆಳುತ್ತಿದ್ದಾಗಲೂ ಬರ ಇತ್ತು, 1631ರಿಂದ66ರವರೆಗಿದ್ದ ಬರದಲ್ಲಿ ಅಸಂಖ್ಯ ಜನ ಸತ್ತಿದ್ದರು. ಇಂದಿಗೂ ಮನೆಮಾತಾಗಿರುವ "ಡೋಗಿ" ಬರ 1791ರಲ್ಲಿ ಬಂದಿತ್ತು. ಡೋಗಿ ಎಂದರೆ ಮರಾಠಿಯಲ್ಲಿ ಅಸ್ಥಿಪಂಜರ ಎಂದರ್ಥ. ಅಂದಿನ ಬರದಲ್ಲಿ ಕೂಳು ಸೇರಿಲ್ಲದೆ ಸತ್ತವರ ಅಸ್ಥಿಪಂಜರವೇ ಜೀವಂತ ಓಡಾಡುವ ಜನರಿಗಿಂತಲೂ ಹೆಚ್ಚಾಗಿದ್ದುದರಿಂದಲೇ ಅದಕ್ಕೆ "ಡೋಗಿ" ಬರ ಎಂಬ ಹೆಸರು ಬಂದಿತ್ತು. 1820, 1876, 1891, 92, 97, ಹೀಗೆ ಬರಗಾಲವೇ, ಬರಗಾಲ. 1918, 1919ರಲ್ಲಿ ಬರ ಬಂದಾಗ ಸಾವಿರಾರು ಜನ ಇನ್‌ಪ್ಲ್ಯುಯೆಂಜ್‌ದಿಂದ ಮರಣವನ್ನಪಿದ್ದರು. 1923, 27, 36, 42, 45 ಹಾಗೆಯೇ ಸ್ವಾತಂತ್ರ್ಯದ ನಂತರ 47, 48, 53, 54, 58, 59, 68, 74 ಹಾಗೆಯೇ ಈಗ 80ರಿಂದ 86ರವರೆಗೂ ಸತತ ಬರಗಾಲದ ಬವಣೆಗೆ ತುತ್ತಾಗುತ್ತ ಬಂದಿದ್ದಾರೆ ಈ ಜಿಲ್ಲೆಯ ಜನ, ಬಡರೈತರು, ಕೃಷಿಕಾರ್ಮಿಕರು.

ಬರ ಬಂದಾಗೆಲ್ಲ ದನಕರುಗಳು ಮೇವಿಲ್ಲದೆ, ಜನ ಆಹಾರ, ಕುಡಿಯುವ ನೀರಿಗಾಗಿ ಕಷ್ಟ ಪಟ್ಟಿದ್ದಾರೆ.

ಪಂಜಾಬ್ ಆಗಬೇಕಾಗಿದ್ದದ್ದು ರಾಜಸ್ಥಾನವಾಗಿದೆ

ರಾಜ್ಯದ ಇತರ ಪ್ರದೇಶಗಳಂತೆಯೇ ಬಿಜಾಪುರ ಜಿಲ್ಲೆಯ ಬರಗಾಲ ಮಾನವ ನಿರ್ಮಿತವೆಂದೇ ಹೇಳಬೇಕಾಗುತ್ತದೆ. ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ಡೋಣಿ ಎಂಬ ಐದು ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತಿದ್ದು, ಈ ನದಿಗಳ ನೀರಿನ ಸದುಪಯೋಗ ಮಾಡಿಕೊಂಡಿದ್ದಿದ್ದರೆ ಅದು ಎರಡನೇ "ಪಂಜಾಬ್" ಆಗಬಹುದಾಗಿತ್ತು. ಆದರೆ ಸರಕಾರದ ಅಸಮರ್ಥ ಯೋಜನೆಗಳಿಂದಾಗಿ ರಾಜಸ್ಥಾನದ ಗೆಳೆಯನಂತಿದೆ.

1943ರ ಬರಗಾಲದ ಬರವೆಂದು ವಿಶ್ವದ ತುಂಬ ಪ್ರಸಿದ್ಧವಾದ 35ಲಕ್ಷ ಜನಸತ್ತ ಆ ದಾರುಣಬರಗಾಲದ ನಂತರ ಕೃಷಿ ತಜ್ಞರುಗಳು, ತಾಂತ್ರಿಕರುಗಳನ್ನುಳ್ಳ ಸಮಿತಿಯನ್ನು ನೇಮಿಸಿ ತ.ತುರ್ತಕ್ರಮಗಳ ಬಗ್ಗೆ ಗಡ್ಡಕ್ಕೆ ಬೆಂಕಿ ಹೊತ್ತಿದಾಗ ಬಾವಿ ಅಗೆಯುವವರಂತೆ ನಿರಾವರಿ ಯೋಜನೆಗಳನ್ನು ಯೋಜಿಸಲಾರಂಭಿಸಿತು. ಆ ದಿವಸಗಳ ಆಳ್ವಿಕೆಯಲ್ಲಿ ಕೃಷ್ಣಾ, ಮಲಪ್ರಭಾ, ಘಟಪ್ರಭಾ, ನದಿಗಳಲ್ಲಿ ನೀರಾವರಿಯ ಯೋಜನೆಗಳು ಸಿದ್ಧವಾದವು.

ಕಮ್ಯೂನಿಸ್ಟ್ ಪಕ್ಷದ ಹೋರಾಟ

1945ರಿಂದಲೂ ಕಮ್ಯೂನಿಸ್ಟ ಪಕ್ಷ ಬ್ರಿಟಿಷರು ತಯಾರಿಸಿದ್ದ, ಹಾಗೆಯೇ ಪಕ್ಷ ಸೂಚಿಸಿದ್ದ ಯೋಜನೆಗಳನ್ನು ಕೈಗೊಂಡು ಜಿಲ್ಲೆಯ ಖಾಯಂ ಬರ ನಿವಾರಣೆಗೆ ಸಹಾಯ ಮಾಡಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತ ಬಂದಿತು. ಕೊನೆಗೆ 1964ರಲ್ಲಿ ಕಮ್ಯೂನಿಸ್ಟ್ ಪಕ್ಷಸಾರ್ವಜನಿಕರ ಬೆಂಬಲದಿಂದ 22ದಿವಸ ಬಿಜಾಪುರದಲ್ಲಿ ಉಪವಾಸಸತ್ಯಾಗ್ರಹ ನಡೆಸಿದ ಪರಿಣಾಮವಾಗಿ ಆಲಮಟ್ಟಿಯಲ್ಲಿ ಅಡಿಗಲ್ಲು ಸಮಾರಂಭ ವಾಯಿತು. ಇಂದಿರಾಗಾಂಧಿ, ಲಾಲ ಬಹದ್ದೂರ್ ಶಾಸ್ತ್ರಿ, ಅಂದಿನ ನೀರಾವರಿ ಮಂತ್ರಿ ಕೆ.ಎಲ್. ರಾವ್ ಆಲಮಟ್ಟಿಗೆ (ಅಪ್ಪರ್ ಕೃಷ್ಣಾ ಯೋಜನೆ) ಸಂದರ್ಶನವಿತ್ತು, ಆಶ್ವಾಸನೆಗಳ ಸುರಿಮಳೆ ಗರೆದರು. ಅಂದು ಒಂದು ನೂರ ಕೋಟಿ ರೂ. ಖರ್ಚಿನಿಂದ ಪೂರ್ಣ ಗೊಳ್ಳಬೇಕಾಗಿದ್ದ ಯೋಜನೆಗೆ ಈ ರೂ.1500 ಕೋಟಿಬೇಕಾಗಿದೆ.

ಘಟಪ್ರಭಾ, ಮಲಪ್ರಭಾ ಯೋ ನೆಗಳಿಂದ ಇತ್ತೀಚಿನ ವರ್ಷಗಳಲ್ಲಿ ಬಿ ಪುರ ಜಿಲ್ಲೆಯ ಜಮಖಂಡಿ, ಮುಧೋ ಬೀಳಗಿ, ಬಾದಾಮಿ ತಾಲೂಕು ಕೆಲವು ಪ್ರದೇಶಕ್ಕೆ ನೀರು ಸಿಗುವಂ ಗಿದೆ ಹಲವಾರು ಕೆರೆಗಳನ್ನ ದ್ದರೂ ಸತತವಾಗಿ ಮಳೆ ಬಾರ ವುದರಿಂದ ಕೆರೆ, ಬಾವಿಗಳಲ್ಲಿ ನೀ ದಂತಾಗಿದೆ. ಆಲಮಟ್ಟಿ ಯೋ ಪೂರ್ಣವಾಗುತ್ತಿದ್ದರೆ, ದೊಡ್ಡ ಪ್ರ ವರವಾಗಿ ನೀರು ಸಂಗ್ರಹವಾಗುತ್ತಿ ದರಿಂದ ಕೆರೆ, ಭಾವಿಗಳಲ್ಲಿ ನೀರಿರ ಮಾಡಲು ಸಾಧ್ಯ. ದುರಾದೃಷ್ಟ ಕಾಂಗ್ರೆಸ್ ಸರಕಾರ ಬರ ನಿವಾ ಕಾಯಂ ಕೆಲಸ ಮಾಡಿಲ್ಲ. ವರ್ಷ ಅಧಿಕಾರದಲ್ಲಿರುವ ಜನ ಕಾರ ಕೂಡ ಆ ದಿಸೆಯಲ್ಲಿ ಗೊಂಡಿದೆ.

ಜನತಾ ಸರ್ಕಾರ

ಕೃಷ್ಣಾ ಮೇಲ್ದಂಡೆ ಯನ್ನು ತೀವ್ರ ಗೊಳಿಸುತ್ತಿ ಜನತಾ ಸರಕಾರ ಹೇಳುತ್ತಿದೆ ಪೂರಕವಾಗಿ ಕಾಲುವೆ ಕೆಲಸ ಪ್ರಾರಂಭಿ ಬೇಕೆಂದು

'ದೋ-ಆಬ್' ರಾಯಚೂರಿನಲ್ಲಿ ಬರಗಾಲ

ಒಂದು ಕಡೆ ತುಂಗಭದ್ರೆ ಮತ್ತೊಂದೆಡೆ ಕೃಷ್ಣೆಯರ ನಡುವೆ ಇರುವ ಈ ರಾಯಚೂರಿನಲ್ಲಿ ಬರಗಾಲದ ಬವಣೆ ರಾಯಚೂರಿನ ಒಂಭತ್ತು ತಾಲೂಕುಗಳಲ್ಲಿ ರಾಯಚೂರು, ಮಾನ್ವಿ, ಸಿಂಧನೂರು, ಗಂಗಾವತಿ ತಾಲೂಕಿನ 5ಲಕ್ಷ ಎಕರೆ ಜಮೀನಿಗೆ ತುಂಗಭದ್ರಾ ಎಡದಂಡೆಯಿಂದ ನೀರೊದಗಿಸಲಾಗಿದ್ದನ್ನು ಬಿಟ್ಟರೆ ಜಿಲ್ಲೆಯ ಉಳಿದ ಭಾಗವೆಲ್ಲಾ ಬರಗಾಲಕ್ಕೆ ತುತ್ತಾಗಿದೆ. ಸಣ್ಣಪುಟ್ಟ ಏತ ನೀರಾವರಿ ಯೋಜನೆಗಳನ್ನು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆಯನ್ನು ಸೇರಿದಂತೆ ಕನಿಷ್ಠ 6ರಿಂದ 7 ಲಕ್ಷ ಎಕರೆಗೆ ನೀರು ದೊರೆಯಬೇಕಾಗಿದ್ದರೂ ಕೋಟಿಗಟ್ಟಲೆ ಹಣವನ್ನು ಸುಮ್ಮನೇ ಕುಳಿತು ಕರಗಿಸುತ್ತಿದ್ದ ನೀರಾವರಿ ಇಲಾಖೆಯ ಸಬ್ ಡಿವಿಜನ್‌ಗಳನ್ನು ಕೆಲಸಕ್ಕೆ ಹಚ್ಚಿ ಹೊಲಗಳಿಗೆ ನೀರೊದಗಿಸುವ ಬದಲು ಕಿತ್ತು ಹಾಕಿರುವುದನ್ನು ಬಿಟ್ಟರೆ ಉಳಿದಂತೆ ಯಾವುದೇ ರೀತಿಯ ಶಾಶ್ವತ ಪರಿಹಾರ ಕ್ರಮವನ್ನು ಕೈಗೊಂಡಿಲ್ಲ.

ಜಿಲ್ಲೆಯ ಹೆಚ್ಚಿನ ಭಾಗ ಬರಗಾಲದಿಂದ ಬಳಲುತ್ತಿದ್ದರೂ ಅತಿ ಸಂಕಷ್ಟಕ್ಕೆ ಒಳಗಾಗಿರುವ ಕುಷ್ಟಗಿ, ಲಿಂಗಸುಗೂರು ತಾಲೂಕುಗಳಲ್ಲಿಯೂ ಕೂಡ ಸಮರ್ಪಕ ಪರಿಹಾರ ಕ್ರಮವನ್ನು ಸರಕಾರ ನಿರ್ವಹಿಸದೆ ಇದ್ದ ಕಾರಣ ಲಕ್ಷಾಂತರ ಕೃಷಿ ಕೂಲಿಕಾರರು ನೀರಾವರಿ ಪ್ರದೇಶಕ್ಕೆ ಹಾಗೂ ನಗರ ಪ್ರದೇಶಗಳಿಗೆ ವಲಸೆ ಹೋಗುವಂತಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘ ತೀವ್ರ ಸತ್ಯಾಗ್ರಹ, ಪಿಕೆಟಿಂಗ್, ಘೇರಾವ್ ಧರಣಿಯಂತಹ ಕಾರ್ಯಕ್ರಮಗಳನ್ನು ಹಾಕಿ

ರದ ಮಂಜೂರಿ ಪಡೆದ ಕೆರೆಗಳ ಕೆಲಸ ಹಾಗೆಯೇ ನದಿಗಳ ಮಣ್ಣು ತೆಗೆಯುವ ಕಾಯಂ ರಸ್ತೆ ಮಾಡುವ, ಒಡ್ಡು ಹಾಕುವ ಕಾರ್ಯ ಪ್ರಾರಂಭಿಸಬೇಕೆಂದು ಪಕ್ಷ ಮತ್ತು ರೈತ ಸಂಘ ಒತ್ತಾಯಿಸುತ್ತಿದೆ.

ಬರಗಾಲ ಬಂದಾಗಲೆಲ್ಲ ಹಳ್ಳಿ ಜನ ಮಹಾರಾಷ್ಟ್ರ ಗೋವೆ, ಮಂಗಳೂರು, ಬೆಂಗಳೂರುಗಳಿಗೆ ಮನೆ ಮಕ್ಕಳನ್ನೆಲ್ಲ ಕರೆದುಕೊಂಡು ಕೆಲಸಕ್ಕೆ ಹೋಗುತ್ತಾರೆ. ಜೂನ್ ತಿಂಗಳಲ್ಲಿ ತಂತಮ್ಮ ಊರುಗಳಿಗೆ ಹಿಂದಿರುಗುತ್ತಾರೆ.

ಈ ವರ್ಷ ಮೇವು, ನೀರಿನ ಸಮಸ್ಯೆ ಅತಿ ಗಂಭೀರವಾಗಿರುವುದರಿಂದ, ಜನರೂ, ದನಕರುಗಳೂ ಹಲವಾರು ಹಳ್ಳಿಗಳಲ್ಲಿ ಕಾಣಸಿಗುವುದಿಲ್ಲ

ಸರಕಾರ ಕೆಲವು ಕಡೆ ಗೋಶಾಲೆಗಳನ್ನು ಪ್ರಾರಂಭಿಸಿದೆ. ಜನರು ತಮ್ಮ ದನಗಳನ್ನು ಅಲ್ಲಿಗೆ ಕಳುಹಿಸಲು ಹಿಂಜರಿಯುತ್ತಿದ್ದಾರೆ. ಅಲ್ಲಿ ಸ್ವಚ್ಛತೆಯಿಲ್ಲ, ನೀರಿನ ವ್ಯವಸ್ಥೆಯಿಲ್ಲ, ರಕ್ಷಣೆ ಸಿಗಲಾರದು, ಸರಕಾರ ತರಿಸುವ ಮೇವನ್ನು ಮಾಲೀಕರಿಗೆ ಹಂಚಲೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಕೊಂಡ ಮೇಲೆ ಮಾತ್ರ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿದೆ. ಸಣ್ಣ ಪ್ರಮಾಣದಲ್ಲಿ ಜಾನುವಾರುಗಳಿಗೆ ಮೇವು ಒದಗಿಸಲಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಈ ಪ್ರದೇಶದಲ್ಲಿ ಅತಿ ಕಡಿಮೆ ಮಳೆಯಾಗಿದ್ದು ಬೆಳೆಗಳೆಲ್ಲ ಹಾಳಾಗಿದ್ದರಿಂದ ಕೃಷಿ ಕೂಲಿ ಕಾರ್ಮಿಕರು ನೀರಾವರಿ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಆದರೆ ಈ ಬಾರಿ ನೀರಾವರಿ ಪ್ರದೇಶದಲ್ಲಿ ಕಾಲುವೆಯಲ್ಲಿ ಸರಿಯಾದ ಸಮಯಕ್ಕೆ ನೀರೊದಗಿಸದೆ, ಅಸಮರ್ಪಕ ಕಾಲುವೆ ನೀರಿನ ಉಸ್ತುವಾರಿಯಿಂದಾಗಿ ಮತ್ತು ಮೂರನೇ ದರ್ಜೆಯ, ಅನೇಕ ರೀತಿಯಲ್ಲಿ ನಿಷೇಧಿಸಿದ ಕ್ರಿಮಿನಾಶಕವನ್ನು ಇಲ್ಲಿ ಉಪಯೋಗಿಸಿರುವುದರಿಂದ ಹತ್ತಿ ಹಾಗೂ ಇತರೆ ಬೆಳೆಗೆ ಬಿಳಿ ನೊಣಗಳು ಬಿದ್ದು ಉಪಯೋಗಿ ಕ್ರಿಮಿಗಳನ್ನೂ ತಿಂದು ಹಾಳು ಮಾಡಿದ್ದರಿಂದ ಕಂಗೆಟ್ಟ ನೀರಾವರಿ ರೈತರೂ ಕೂಡ ಬರಗಾಲದ ಜನರಿಗೆ ಕೆಲಸ ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ.

ದನಗಳು ಮೇವಿಲ್ಲದೆ ಸಾಯುತ್ತಿವೆ. ಅಲ್ಲೊಂದು ಇಲ್ಲೊಂದು ಗೋಶಾಲೆಗಳನ್ನು ನಿರ್ಮಿಸಿದ್ದರೂ ದನಗಳು ಕೆಸರು ನೀರನ್ನು ಕುಡಿದು ಕಂಗಾಲಾಗಿದ್ದರೂ ಪಶುವೈದ್ಯರು ಸ್ಥಳಗಳಿಗೆ ಭೇಟಿ ಕೊಡಲು ತಯಾರಿಲ್ಲವಾದ ಕಾರಣ ಜಾನುವಾರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಯುತ್ತಿವೆ. ಈ ಮಧ್ಯೆ ಕಾಮಗಾರಿ ಕೆಲಸಗಳಲ್ಲೂ ಸಹ ಹೆಚ್ಚಿನ ಜನರನ್ನು ತೆಗೆದುಕೊಳ್ಳದೆ ಇರುವ ಜನರ ಮೇಲೆಯೇ ಹೆಚ್ಚಿನ ಕೆಲಸ ಹೇರಿದ್ದಾರಲ್ಲದೆ, ಮಾತುಕತೆಯಂತೆ 7-50 ರೂ. ಕೂಲಿ ಕೂಡ ಸರಿಯಾಗಿ ನೀಡುತ್ತಿಲ್ಲ. ಹೆಚ್ಚು ಜನರನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದೇವೆಂದು ಖೋಟಾ ಸಹಿ ಪಡೆದು ಹಣವನ್ನು ನುಂಗಿ ಹಾಕಲಾಗುತ್ತಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಸಮಿತಿ ಬರಗಾಲ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಿ ಮೇವು ಕೇಂದ್ರ, ಗೋಶಾಲೆ, ಗಂಜಿ ಕೇಂದ್ರವನ್ನು ಸ್ಥಾಪಿಸಲು ಸಾಲ ವಸೂಲಿಯನ್ನು ಮುಂದೂಡುವಂತೆ ಮಾಡಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

–ಚಂದ್ರಶೇಖರ ಬಾಳೆ

ಜನಪದ ಕಾವ್ಯದಲ್ಲಿ ಬರಗಾಲ

ಕನ್ನಡ ಸಾಹಿತ್ಯದ ಕಾವ್ಯಗಳು ಸಾಗರವರ್ಣನೆ, ಪ್ರಕೃತಿ ವರ್ಣನೆ ಮೊದಲಾದ ಅಷ್ಟಾದಶ ವರ್ಣನೆಗಳಲ್ಲಿ ಮುಳುಗಿರುವಾಗ ನೂರಾರು ವರ್ಷಗಳಲ್ಲಿ ಅನೇಕ ಬಾರಿ ಬಂದಡಸಿದ ಬರಗಾಲದ ಯಾತನೆ ಜನಪದ ಕಾವ್ಯದಲ್ಲಿ ಹೊರಚಿಮ್ಮಿದೆ. ಮಳೆಯರಾಜನನ್ನು ಕರೆದು ಬೇಡುವುದರಲ್ಲಿ, ಮಳೆಗಾಗಿ ನಾನಾ ರೂಪದ ಆಚರಣೆಗಳನ್ನು, ನೃತ್ಯಗಳನ್ನು ಮಾಡುವುದರಲ್ಲಿ, ಬರಗಾಲ ಜನ, ಜಾನುವಾರುಗಳನ್ನು, ಕೊನೆಗೆ ಹಕ್ಕಿ ಗುಬ್ಬಿಗಳನ್ನು (ಬಿಸಲಿಗೆ ಬಾಯಿ ತೆರೆದಾವ ಅಗುಬ್ಬಿ, ಮಳೆರಾಜಗ ಬೇಡಿ ಅಳತಾವ) ಹೇಗೆ ಕಾಡಿಸುತ್ತದೆ ಎಂದು ಬಣ್ಣಿಸುವುದರಲ್ಲಿ, ಕೊನೆಗೆ 'ಸಾಂಬಶಿವನೆ ನಿನ್ನ ಗುಡಿಗೆ ಬೆಂಕಿ ಹೊತ್ತೀತು' ಎಂದು ಎಲ್ಲ ನಂಬಿಕೆಯನ್ನು ಕಳೆದುಕೊಂಡು ಕೆಂಡಕಾರುವುದರಲ್ಲಿ ಅಭಿವ್ಯಕ್ತಿ ಪಡೆಯುತ್ತದೆ ಯಾವುದೇ ಉತ್ತಮ ಸಾಹಿತ್ಯಕ್ಕೆ ಹೆಗಲೆಣೆಯಾಗುವ ದುಡಿಯುವ ಜನಪದದ ನೋವಿನ ಸಮೃದ್ಧ ಅಭಿವ್ಯಕ್ತಿಯ ಈ ಕೆಲವು ತುಣುಕುಗಳನ್ನು 'ಐಕ್ಯರಂಗ'ದ ಓದುಗರಿಗೆ ಇಲ್ಲಿ ಪರಿಚಯಿಸಲಾಗಿದೆ.

ಬರಗಾಲ ಕಾಮಗಾರಿಯ ಅನ್ನ, ಗಂಜಿ

ಅನ್ನೇಕಾರ ಅರಸು ನಿನ್ನ ಸಂಬಳ ಸಾಕು
ಹನ್ನೆರಡು ವರುಷಲ ಹಳೆ ಹಕ್ಕಿ ಅನ್ನ ಉಂಡು
ಚನ್ನಿಗ ನನ್ನ ತಮ್ಮ ಬಡವಾದ

ಅನ್ನ ಕ್ಷೇತ್ರದಲ್ಲಿ ಅಂಬ್ಲಿ ಕುಡ್ದು
ಕೈಕಾಲು ಕೆಟ್ಟಾವು ಮೋತಿ
ಕೂಳಿಲ್ಲದೆ ಬಿದ್ದಾವು ಅನೇಕ
ಕಾಲು ಕೈ ಹೋಗಿ ಬಿದ್ದಾರ ಕೈಲಾಕ

[ಕಾಮಗಾರಿಯ ವೇಳೆ, ಹಿಂದೆ ಗೌಡ, ಪಾಟೀಲ,ಕುಲಕರ್ಣಿಗಳು ಈಗ ಸರಕಾರದ ಭ್ರಷ್ಟ ಅಧಿಕಾರಿಗಳು ಹಂಚುವ ಮುಗ್ಗಿದ, ಕೆಟ್ಟ, ಗೋಧಿ, ಜೋಳ, ಅಕ್ಕಿಯ ಕತೆಯೂ ಇದೇ ಆಗಿದೆ]

ನೀರಿನಾಸರೆಯಿಲ್ಲದ ನಾಡು ಕೋಲಾರದ ಬವಣೆ

ಕರ್ನಾಟಕದ ಅತಿ ಹಿಂದುಳಿದ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯೂ ಒಂದು. ಇಲ್ಲಿನ ಜನ ಸಂಖ್ಯೆಯಲ್ಲಿ 90 ಭಾಗ ವ್ಯವಸಾಯದ ಮೇಲೇ ಆಧಾರಿತರಾಗಿದ್ದಾರೆ. ವ್ಯವಸಾಯಕ್ಕೆ ಯಾವುದೇ ರೀತಿಯ ನೀರಾವರಿ ಸೌಲಭ್ಯಗಳಾಗಲಿ ನದಿಗಳ ಆಸರೆಯಾಗಲಿ ಇಲ್ಲದೆ ಮಳೆಯನ್ನೇ ನಂಬಿ ಕೃಷಿ ನಡೆಸಬೇಕಾದ ಪರಿಸ್ಥಿತಿಯಿದೆ. ಪ್ರತಿ ವರ್ಷವೂ ಸಮಯಕ್ಕೆ ಸರಿಯಾಗಿ ಮಳೆಯಾಗದೆ ಹೆಚ್ಚು ಕಡಿಮೆ ಶಾಶ್ವತ ಬರಗಾಲಕ್ಕೆ ತುತ್ತಾಗಿದೆ.

ಈ ವರ್ಷದ ಬರವಂತೂ ಭೀಕರವಾಗಿದ್ದು ಮುಖ್ಯವಾಗಿ ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು ತಾಲೂಕುಗಳು ಈ ದಶಕದ ಅತಿ ಧಾರುಣ ಕ್ಷಾಮ ಪರಿಸ್ಥಿತಿಯನ್ನೆದುರಿಸುತ್ತಿವೆ. ಕೋಲಾರ ಜಿಲ್ಲೆಯ ಮುಳಬಾಗಿಲು, ಶ್ರೀನಿವಾಸಪುರ, ಬಂಗಾರಪೇಟೆ ತಾಲೂಕುಗಳು ಮಾತ್ರ ಬರಗಾಲದಿಂದ ಬಚಾವಾಗಿದೆ. ಇನ್ನುಳಿದ ಎಲ್ಲಾ ಕಡೆಯೂ ಬೆಳೆಗಳು ನಾಶವಾಗಿದ್ದು ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಶೇಖಡ 10 ರಷ್ಟು ಕೂಡ ಬೆಳೆಯಾಗಿಲ್ಲ ಆದರೆ ವಾಸ್ತವವಾಗಿ ಶೇಖಡ ಎರಡು ಅಂಶದ ಗೆರೆಯನ್ನೇ ದಾಟಿಲ್ಲ

ಎಲ್ಲಿ ಹೋದರೂ ಮೌನ

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲೂಕುಗಳಲ್ಲಿ 7 ವರ್ಷಗಳಿಂದೀಚೆಗೆ ಯಾವುದೇ ಕೆರೆ ಕೂಡ ತುಂಬಿಲ್ಲ ಅಷ್ಟೇ ಅಲ್ಲದೆ ಇಡೀ ವರ್ಷದಲ್ಲಿ ನಾಲ್ಕು ಅಂಗುಲ ಕೂಡ ಮಳೆಯಾಗದೆ ಜನರು ದಿಕ್ಕೆಟ್ಟು ಶೇಖಡ 80 ಭಾಗ ಪರ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. 30—40 ಎಕರೆ ಜಮೀನು ಹೊಂದಿರುವ ರೈತರು ಸಹ ವಲಸೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಎಲ್ಲಿ ಹೋದರೂ ಮೌನ. ಕೆಲವು ಕಡೆ ಮೌನವನ್ನು ಒಡೆದು ಈ ಅಳುವಿನ ಶಬ್ದ ಮಾತ್ರ ಕೇಳಿ ಬರುತ್ತದೆ.

ಮೇಲ್ವರ್ಗದ ರೈತರು ಮಧ್ಯಮ ವರ್ಗದವರೂ ಸಹ ನಿಸ್ಸಹಾಯಕರಾಗಿದ್ದು ಕೂಲಿ ಮಾಡುವ ಪರಿಸ್ಥಿತಿ ಉಂಟಾಗಿದ್ದು ಅವರು ಊರಿನ ಜನರ ಮುಂದೆ ಕೂಲಿ ಮಾಡಲಾರದೆ ಮಾನಸಿಕವಾಗಿ ನರಳುತ್ತಿದ್ದು ನೆರೆಯ ರಾಜ್ಯವಾದ ಆಂಧ್ರ, ತಮಿಳು ನಾಡಿಗೆ ಗುಳೆ ಹೋಗುತ್ತಿದ್ದಾರೆ. ಇನ್ನು ಕೆಲವರು ತಮ್ಮ ಸಂಗಾತಿಗಳಾದ ದನಕರು, ಮೇಕೆಗಳನ್ನು ಬಿಟ್ಟು ಹೋಗಲಾಗದವರಿಗೆ ಹಿಂದೆ ಯಾವಾಗಲೋ ಹಾಕಿಸಿದ್ದ ಬೋರ್‌ವೆಲ್‌ಗಳು ಮಾತ್ರವೇ ಆಸರೆಯಾಗಿದೆ. ಬೋರ್‌ವೆಲ್‌ಗಳಲ್ಲೂ ನೀರು ಹಿಂಗಿ ಹೋಗುವ ಪರಿಸ್ಥಿತಿಯಿದ್ದು ಮುಂದಿನ ತಿಂಗಳುಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ತಲೆಯೆತ್ತಲಿದೆ.

ಜಾನುವಾರುಗಳಲ್ಲಿ ಸುಮಾರು ಈಗಾಗಲೇ ಕಸಾಯಿ ಖಾನೆಗಳಿಗೆ ರವಾನೆಯಾಗಿದ್ದು ಉಳಿದವುಗಳ ಸ್ಥಿತಿಯೂ ಭೀಕರವಾಗಿದೆ. ಕೆರೆ ಕುಂಟೆಗಳಲ್ಲಿ ನೀರಿಲ್ಲದೆ ಮೇವಿಲ್ಲದೆ ಪರದಾಡುತ್ತಿರುವ ಜಾನುವಾರುಗಳು ನೀರು ಮೇವುಗಳನ್ನು ಒದಗಿಸದಿದ್ದರೆ ಕೆಲವೇ ದಿನಗಳಲ್ಲಿ ಇಡೀ ಸಂಖ್ಯೆಯು ಮಾಯವಾಗುವ ಪರಿಸ್ಥಿತಿಯಿದೆ. ಈ ಭೀಕರ ಪರಿಸ್ಥಿತಿಯ ಬಗ್ಗೆ ನಮ್ಮ ಪ್ರಾಂತ ರೈತ ಸಂಘ ಮತ್ತು ಪಕ್ಷ ಸರ್ಕಾರಕ್ಕೆ ಕಳೆದ ಅಕ್ಟೋಬರ್ ತಿಂಗಳಲ್ಲಿಯೇ ಎಚ್ಚರಿಕೆ ನೀಡಿದ್ದರೂ ಉದಾಸೀನ ತೋರಿಸಿತು. ಇದರಿಂದಾಗಿ ಡಿಸೆಂಬರ್ ತಿಂಗಳಲ್ಲಿ ಪುನಃ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕಾಲ್ನಡಿಗೆ ಜಾಥಾ ಸಂಘಟಿಸಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ನಡೆಸಲಾಯಿತು. ನಂತರ ಬಾಗೇಪಲ್ಲಿ ಮತ್ತು ಗುಡಿಬಂಡೆಗಳಲ್ಲಿ ಎರಡು ಗೋಶಾಲೆಗಳನ್ನು ಸ್ಥಾಪಿಸಿರುವುದು ಬಿಟ್ಟರೆ ಯಾವುದೇ ಪರಿಹಾರ ಕೈಗೊಂಡಿಲ್ಲ. ಗೋಶಾಲೆಗಳೂ ಸಹ ಕಾಟಾಚಾರಕ್ಕಾಗಿ ನಡೆಸುತ್ತಿರುವಂತಿವೆ. ಇರುವ ಎರಡೇ ಗೋಶಾಲೆಗಳಿಗೆ ಹೆಚ್ಚು ಜಾನುವಾರುಗಳು ಬರುತ್ತಿರುವುದರಿಂದ ಪರಿಸ್ಥಿತಿ ಕೈಗೆಟುಕುತ್ತಿಲ್ಲ.

ಯಾವುದೇ ರೀತಿಯಲ್ಲಿ ಬರಗಾಲವನ್ನು ಎದುರಿಸುತ್ತೇವೆಂದು ಹೇಳುತ್ತಿದ್ದರೂ ಸಹ ಕಾಮಗಾರಿ ಕೆಲಸಗಳು ನಡೆಯುತ್ತಿಲ್ಲ. ಈಗ ನಡೆಯುತ್ತಿರುವ ಕಾಮಗಾರಿ ಕೆಲಸದಲ್ಲೂ ಶೇಖಡ 5 ಭಾಗಕ್ಕೂ ಸಹ ಕೆಲಸ ನೀಡಲು ಸಾಧ್ಯವಾಗಿಲ್ಲ. ಬರ ಪರಿಹಾರದ ಕಾರ್ಯಗಳಲ್ಲಿ ಜನತಾ ಸರ್ಕಾರ ಜನರನ್ನು ಅವಲಂಭಿಸದೆ ಸರ್ಕಾರಿ ಅಧಿಕಾರಿಗಳ ಮೇಲೆಯೇ ಆಧಾರಿತವಾಗಿರುವುದರಿಂದ ನಡೆಯುತ್ತಿರುವ ಅಲ್ಪಸ್ವಲ್ಪ ಪರಿಹಾರ ಕಾಮಗಾರಿಗಳು ಸರಿಯಾಗಿ ನಡೆಯದೆ ಹಣ ಪೋಲಾಗುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಇಡೀ ಜಿಲ್ಲೆಯಲ್ಲಿಯೇ ಹಾಹಾಕಾರ ಪ್ರಾರಂಭವಾಗಿ ಜನತೆ ಹೋರಾಟಕ್ಕಿಳಿಯುವುದು ಅನಿವಾರ್ಯವಾಗುತ್ತದೆ

– ಜಿ. ವಿ. ಶ್ರೀರಾಮರೆಡ್ಡಿ

1972–73 ರ ಗುಲ್ಬರ್ಗಾ ಬರಗಾಲ

ಇಸ್ವಿಯಿತ್ತ ಆ ವರ್ಷ ಎಪ್ಪತ್ತೆರಡನ್ನಾ
ಕಲಬುರ್ಗಿ ಜಿಲ್ಲ್ಯಾಕ ಬಂತೊ ಬರಗಾಲನಾ
ಮಿರುಗವ ಮಿಂಚಿನ ಮಳೆಗಾಲ ಸುರಿವಾಯ್ತು
ಮಿರ್ಗ್ಯಾರಿಪ ಮಳಿ ಬರಲಿಲ್ಲ ಪೂರ್ಣಾ
ಎದಿ ಹೊಡದ ಕುಂತಾರ ರೈತರನ್ನಾ
ಜನ ಹೋಗ್ಯಾರ ಸರಕಾರ ತನಾ
ದಂಡೆ ಹಚ್ಚ್ಯಾರ ನಮಗೊಂದು ಬದುಕದ ಕಿನ್ನಾ
ಹೆಣ್ಣು ಗಂಡು ಮುದುಕರು ಸಾವಿರ ತನಾ
ಲೆಕ್ಕದಾಗ ಮುರದ್ಯಾರ ಮೂರಂಚಿನ್ನಾ
ಮನದಾಗ ಉಸರೆಂದು ತುರುಕ್ಯಾರ ಮಣ್ಣು

[ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಭ್ರಷ್ಟಾಚಾರ, 'ಮನೆಯನ್ನು ಸುಡುತ್ತಿರುವ ಬೆಂಕಿಯಲ್ಲಿ ಅಡಿಗೆ ಮಾಡ ಹೋಗುವ' ಅಧಿಕಾರಿಗಳ ನಿಷ್ಕರುಣ್ಯಕ್ಕೆ, ಇಡೀ ವ್ಯವಸ್ಥೆಯ ಹೃದಯಹೀನತೆಗೆ ಸಂಕೇತವಾಗಿದೆ]

ಪ್ರವಾಹ ಮತ್ತು ಬರಪೀಡಿತ ಜನತೆಗೆ ತುರ್ತು ನೆರವು ನೀಡಿ

(7ನೇ ಪುಟದಿಂದ)

ಬೆಲೆ ಏರುವುದನ್ನೇ ಸದಾ ಕಾದುಕೊಂಡಿರುವ ಕಾಳಸಂತೆ ಕೋರರು ಮತ್ತು ಅಕ್ರಮ ದಾಸ್ತಾನುಗಾರರು ಮಾರುಕಟ್ಟೆಗೆ ಬರುತ್ತಿರುವ ಆಹಾರ ಧಾನ್ಯಗಳಲ್ಲಿ ಹೆಚ್ಚಿನ ಪಾಲನ್ನು ಈಗಾಗಲೇ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದಾರೆ. ಭತ್ತದ ಸಂಗ್ರಹ ಬೆಲೆಯನ್ನು ಒಂದು ಕ್ವಿಂಟಾಲಿಗೆ ರೂ. 140 ರಿಂದ ರೂ 160 ರ ವರೆಗೆ ನಿಗದಿ ಮಾಡಬೇಕೆಂದು ಹಲವು ರಾಜ್ಯ ಸರಕಾರಗಳು ಮಾಡಿರುವ ಶಿಫಾರಸನ್ನು ಬದಿಗೊತ್ತಿ ಕೇಂದ್ರ ಸರಕಾರವು ಈ ಬೆಲೆಯನ್ನು ರೂ 122ಕ್ಕೇ ನಿಗದಿ ಪಡಿಸಿದೆ. ಕಾಳಸಂತೆಕೋರರು ಇದಕ್ಕಿಂತ ಸ್ವಲ್ಪವೇ ಹೆಚ್ಚು ಬೆಲೆತೆತ್ತು ಆಹಾರ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಿಡುವ ಮೂಲಕ ಉತ್ಪಾದನೆ ಕಮ್ಮಿಯಾಗಿರುವ ಕಾಲದಲ್ಲಿ ಅದನ್ನು ಮಾರಿ ಅಪಾರ ಲಾಭ ಗಳಿಸುತ್ತಾರೆ.

ಆಹಾರ ಧಾನ್ಯಗಳ ಸಗಟು ವ್ಯಾಪಾರಗಳನ್ನು ಕೇಂದ್ರ ಸರಕಾರವು ಈ ಕೂಡಲೇ ರಾಷ್ಟ್ರೀಕರಿಸಬೇಕೆಂದೂ, ಹಲವು ಹಂತಗಳಲ್ಲಿ ಮಾರಾಟ ತೆರಿಗೆ ವಿಧಿಸುವ ಪದ್ಧತಿಯನ್ನು ರದ್ದು ಪಡಿಸಬೇಕೆಂದೂ, ರೈತರಿಗೆ ಸಮೀಪವಾಗಿರುವ ಕಡೆ ಸಂಗ್ರಹಕ ಕೇಂದ್ರಗಳನ್ನು ತೆರೆದು ಅವರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡಬೇಕೆಂದೂ ಅ.ಭಾ. ಕಿಸಾನ್ ಸಭಾ ಸಮ್ಮೇಳನ ಒತ್ತಾಯಿಸಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜನತೆಗೆ ಆಹಾರಧಾನ್ಯ ಒದಗುವಂತೆ ಮಾಡಲು ತನ್ನ ಬಳಿ ಸಾಕಷ್ಟು ದಾಸ್ತಾನು ಇರಿಸಿಕೊಳ್ಳಬೇಕಾದರೆ ಸರಕಾರ ಇಂತಹ ಉಪಕ್ರಮ ಕೈಗೊಳ್ಳಬೇಕಾದುದು ತೀರಾ ಅಗತ್ಯ. ಸಾರ್ವಜನಿಕ ವಿತರಣಾ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅದರಲ್ಲಿರುವ ವ್ಯಾಪಕ ಭ್ರಷ್ಟಾಚಾರವನ್ನು ತೊಡೆದು ಹಾಕಲೇಬೇಕು. ಇಲ್ಲದಿದ್ದಲ್ಲಿ ಆಹಾರ ಧಾನ್ಯಗಳ ಬೆಲೆ ವಿಪರೀತವಾಗಿ ಏರಿ ಜನ ಹಸಿವಿನಿಂದ ಸಾಯಬೇಕಾದ ಪರಿಸ್ಥಿತಿಯೊದಗಬಹುದು. ಬರಪೀಡಿತ ರಾಜ್ಯಗಳ ಮತ್ತು ನೆರೆ ಹಾವಳಿಗೆ ತುತ್ತಾಗಿರುವ ಪ್ರದೇಶಗಳಲ್ಲಿನ ಹಸಿದ ಜನಕ್ಕೆ ಆಹಾರ ದೊರೆಯುವಂತೆ ಈ ಕೂಡಲೇ ಸರಕಾರಿ ಗೋದಾಮಿನಿಂದ ಆಹಾರ ಧಾನ್ಯಗಳನ್ನು ರವಾನಿಸಬೇಕು.

ಹನ್ನೊಂದು ಅಂಶದ ಕಾರ್ಯಕ್ರಮ

ದೇಶದ ಹೆಚ್ಚಿನ ಭಾಗಗಳಲ್ಲಿ ದಿನೇ ದಿನೇ ಹದಗೆಡುತ್ತಿರುವ ಪರಿಸ್ಥಿತಿಯಿಂದಾಗಿ ಕಂಗೆಟ್ಟಿರುವ ಜನತೆಗೆ ಸೂಕ್ತ ಪರಿಹಾರ ದೊರೆಯುವಂತೆ ಮಾಡಲು ಈ ಕೆಳಗಿನ ಕ್ರಮಕೈಗೊಳ್ಳಬೇಕೆಂದು ಕಿಸಾನ್ ಸಭಾ ಒತ್ತಾಯಿಸಿದೆ.

1) ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಬೇಕು. ಮಾರುಕಟ್ಟೆಗೆ ಬರುತ್ತಿರುವ ಆಹಾರ ಧಾನ್ಯಗಳು ಕಾಳಸಂತೆಕೋರರ ಕೈವಶವಾಗದಂತೆ ನೋಡಿಕೊಳ್ಳಲು ರೈತರಿಗೆ ಸಮೀಪವಿರುವ ಕಡೆ ಅಧಿಕ ಸಂಖ್ಯೆಯಲ್ಲಿ ಸಂಗ್ರಾಹಕ ಕೇಂದ್ರಗಳನ್ನು ಸ್ಥಾಪಿಸಬೇಕು. ಲೆವಿ ಭತ್ತದ ಸಂಗ್ರಾಹಕ ಬೆಲೆಯನ್ನು ಕ್ವಿಂಟಾಲಿಗೆ ರೂ. 140ಕ್ಕೆ ಏರಿಸಬೇಕು ಮತ್ತು ಅದೇ ರೀತಿ ಇತರ ಗುಣಮಟ್ಟದ ಧಾನ್ಯಗಳ ಸಂಗ್ರಹಣ ಬೆಲೆಯನ್ನು ರೈತರಿಗೆ ಲಾಭವಾಗುವ ಮಟ್ಟಕ್ಕೆ ಏರಿಸಬೇಕು.

2) ಪ್ರತಿ ಎರಡು ಸಾವಿರ ಜನರಿಗೆ ಒಂದಾದರೂ ನ್ಯಾಯಬೆಲೆ ಅಂಗಡಿ ಇರುವಂತೆ ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ವಿಸ್ತರಿಸಬೇಕು. ಈ ಅಂಗಡಿಗಳಲ್ಲಿ ಆಹಾರ ಧಾನ್ಯ ಮಾತ್ರವಲ್ಲದೆ ಸಕ್ಕರೆ, ಖಾದ್ಯ ತೈಲ, ಸೀಮೆ ಎಣ್ಣೆ, ಬಟ್ಟೆಬರೆ ಮತ್ತು ಇತರ ಅವಶ್ಯಕ ವಸ್ತುಗಳನ್ನು ನ್ಯಾಯಬೆಲೆಯಲ್ಲಿ ಮಾರಾಟ ಮಾಡಬೇಕು. ಪ್ರತಿ ವ್ಯಕ್ತಿಯನ್ನು ಒಂದು ಘಟಕವಾಗಿ ಪರಿಗಣಿಸಬೇಕಲ್ಲದೆ ಪಡಿತರ ಪದ್ಧತಿಯಲ್ಲಿ ವಿತರಣೆ ಮಾಡುವ ಅವಶ್ಯಕ ವಸ್ತುಗಳ ಪ್ರಮಾಣ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಬೇರೆ ಬೇರೆ ಯಾಗಿರಕೂಡದು.

3) ಬರ ಪೀಡಿತ ರಾಜ್ಯ ಅಥವಾ ಪ್ರವಾಹಪೀಡಿತ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವಂತಹ ಯೋಜನೆಗಳ ನಿರ್ಮಿತಿಗಾಗಿ ಸಾಕಷ್ಟು ಹಣ ಮತ್ತು ಆಹಾರ ಧಾನ್ಯಗಳನ್ನು ಕೂಡಲೇ ಮಂಜೂರು ಮಾಡಬೇಕು. ಇಂತಹ ಕಡೆ ಕೃಷಿಕೆಲಸಗಾರರಿಗೆ ಕನಿಷ್ಠ ವೇತನವನ್ನು ಕಾನೂನಿನ ಮೂಲಕ ನಿಗದಿಮಾಡಬೇಕು. ವೇತನ ನಗದು ರೂಪದಲ್ಲಿ ಅಥವಾ ಅವಶ್ಯಕ ವಸ್ತುಗಳ ರೂಪದಲ್ಲಿ ಇಲ್ಲವೇ ಎರಡನ್ನೂ ಒಳಗೊಂಡಿರಬಹುದು. ಇದರಲ್ಲಿ ನಗದು ಹಣ ಎಷ್ಟಿರಬೇಕು ಮತ್ತು ಅವಶ್ಯಕ ವಸ್ತುಗಳ ಪ್ರಮಾಣ ಎಷ್ಟಿರಬೇಕೆಂಬುದನ್ನು ಬರ ಪೀಡಿತ ಜನದ ಆಯ್ಕೆಗೆ ಬಿಡಬೇಕು.

4) ತಮ್ಮ ಜೀವನ ನಿರ್ವಹಣೆಯ ಎಲ್ಲ ಸಾಧನಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವ ಕೃಷಿ ಕಾರ್ಮಿಕರು, ಬಡರೈತರು, ಕೈ ಕಸಬುಗಾರರು ಮತ್ತಿತರ ಗ್ರಾಮಾಂತರ ಪ್ರದೇಶದ ಬಡವರಿಗೆ ಮುಫತ್ ಪರಿಹಾರ ನೀಡಬೇಕು. ಅವರಿಗೆ ಉದ್ಯೋಗ ನೀಡಬಲ್ಲಂತಹ ಯೋಜನೆಗಳು ಕಾರ್ಯಗತವಾಗುವವರೆಗೆ ಸುಲಭ ಶರತ್ತುಗಳ ಮೇಲೆ ದಿನಬಳಕೆ ಸಾಲ ನೀಡಬೇಕು. ಜನ ಹಸಿವಿನಿಂದ ಸಾಯುವುದನ್ನು ತಪ್ಪಿಸುವುದಕ್ಕೆ ಇದೊಂದೇ ಮಾರ್ಗ.

5) ಕ್ಷಾಮ ಅಥವಾ ಪ್ರವಾಹ ಪೀಡಿತ ಪ್ರದೇಶಗಳ ಜನರಿಂದ ಸರಕಾರಕ್ಕೆ ಬರಬೇಕಾದ ತೆರಿಗೆ ಕಂದಾಯ ಮತ್ತು ಸಹಕಾರಿ ಸಂಘ ಇಲ್ಲವೇ ಬ್ಯಾಂಕುಗಳಿಗೆ ಮರುಪಾವತಿ ಮಾಡಬೇಕಾದ ಸಾಲದ ಕಂತುಗಳು ಇತ್ಯಾದಿಗಳನ್ನು ವಸೂಲು ಮಾಡುವುದನ್ನು ತಕ್ಷಣ ತಡೆ ಹಿಡಿಯಬೇಕು. ನಾಶವಾಗಿರುವ ಬೆಳೆಯ ಪ್ರಮಾಣ ಶೇ. 25 ನ್ನು ಮೀರಿರುವ ಕಡೆ ಕಂದಾಯ ಮತ್ತು ಇತರ ತೆರಿಗೆಗಳನ್ನು ಪೂರ್ಣ ಮನ್ನಾ ಮಾಡಬೇಕು. ಜನ ಅನುಭವಿಸುತ್ತಿರುವ ನಷ್ಟದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ಅವರು ಸಹಕಾರಿ ಸಂಘ ಅಥವಾ ಬ್ಯಾಂಕುಗಳಿಗೆ ಮರುಪಾವತಿ ಮಾಡಬೇಕಾಗಿರುವ ಸಾಲದಲ್ಲಿ ಹೆಚ್ಚಿನ ರಿಯಾಯತಿ ನೀಡಬೇಕು.

6) ಕೃಷಿಗೆ ಬೇಕಾಗಿರುವ ಬೀಜಗಳು, ರಸಗೊಬ್ಬರ, ಡೀಸೆಲ್, ಕ್ರಿಮಿನಾಶಕಗಳು ಇತ್ಯಾದಿಗಳನ್ನು ನಿಯಂತ್ರಿತ ಬೆಲೆಯಲ್ಲಿ ರೈತರಿಗೆ ಸರಬರಾಜು ಮಾಡಬೇಕು. ಅಗತ್ಯವಿದ್ದೆಡೆ ಮುಂದಿನ ಬೆಳೆ ಬಿತ್ತಲು ಅನುಕೂಲವಾಗುವಂತೆ ಇವುಗಳನ್ನು ಬೆಳೆ ಸಾಲದ ರೂಪದಲ್ಲೂ ಅಥವಾ ನೆರವಿನ ರೂಪದಲ್ಲೂ ಕೊಡಬೇಕು. ಬರ, ನೆರೆ ಮತ್ತು ಚಂಡಮಾರುತಗಳಿಂದ ಹಾನಿಗೊಳಗಾದ ಯಾವುದೇ ರಾಜ್ಯದಲ್ಲೂ ವಿದ್ಯುತ್ ಶುಲ್ಕ ಏರಿಸಬಾರದು, ಬೀಜ, ರಸಗೊಬ್ಬರ, ಕ್ರಿಮಿನಾಶಕ ಮತ್ತು ಡೀಸೆಲ್‌ನ ಬೆಲೆಯನ್ನೂ ಹೆಚ್ಚಿಸಬಾರದು.

7) ಮನೆ ಕಳೆದುಕೊಂಡಿರುವವರಿಗೆ ಅಥವಾ ಮನೆಗಳಿಗೆ ಹಾನಿಯುಂಟಾಗಿರುವ ಜನರಿಗೆ ಸಾಕಷ್ಟು ಪರಿಹಾರ ಮತ್ತು ಸಾಲವನ್ನು ನೀಡಬೇಕು.

8) ಪ್ರವಾಹದಿಂದಾಗಿ ಯಾರ ಭೂಮಿಯಲ್ಲಿ ನೀರು ತುಂಬಿಕೊಂಡು ಕೊಳಕಲು ಆಗಿವೆಯೋ ಅಥವಾ ಮಿತಿಮೀರಿದ ಪ್ರಮಾಣದಲ್ಲಿ ಕ್ಷಾರ ಸೇರಿದೆಯೋ ಅಂಥವರ ಭೂಮಿಯನ್ನು ಸರ್ಕಾರ ತನ್ನ ವೆಚ್ಚದಲ್ಲಿ ದುರಸ್ತಿ ಮಾಡಿ ಮರಳಿ ಕೃಷಿಯೋಗ್ಯವಾಗುವಂತೆ ತಕ್ಷಣ ಸೂಕ್ತ ಕ್ರಮಕೈಗೊಳ್ಳಬೇಕು.

9) ಕ್ಷಾಮ ಮತ್ತು ನೆರೆಪೀಡಿತ ಪ್ರದೇಶಗಳಲ್ಲಿ ಎಲ್ಲ ಸ್ವಚ್ಛತಾ ಕಾರ್ಯಗಳನ್ನು ವೈದ್ಯಕೀಯ ನೆರವು ನೀಡುವ ಯೋಜನೆಗಳನ್ನೂ ಕೈಗೊಳ್ಳಬೇಕು.

10) ಮುಂದೆ ಇಂತಹ ಯಾವುದೇ ಹಾನಿಯಾಗುವುದನ್ನು ತಡೆಗಟ್ಟಲು ಸೂಕ್ತ ನೀರಾವರಿ ಯೋಜನೆಗಳನ್ನೂ, ನೆರೆನಿಯಂತ್ರಕ ಕಟ್ಟೆಗಳನ್ನೂ ಕಟ್ಟುವ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕಲ್ಲದೆ ಅವು ನಿಗದಿತ ಕಾಲಾವಧಿಯಲ್ಲಿ ಮುಕ್ತಾಯಗೊಳ್ಳುವಂತೆ ಮಾಡಬೇಕು.

11) ಜೀವನಾವಶ್ಯಕ ವಸ್ತುಗಳು ನಿಗದಿತ ಬೆಲೆಯಲ್ಲಿ ಮತ್ತು ಕ್ರಮಬದ್ಧವಾಗಿ ಜನರಿಗೆ ದೊರೆಕುವುದನ್ನು ಖಚಿತ ಪಡಿಸುವುದಕ್ಕಾಗಿ ಆಯಾ ರಾಜ್ಯ ಅಥವಾ ಪ್ರದೇಶಗಳಲ್ಲಿರುವ ಬೇರೆ ಬೇರೆ ರಾಜಕೀಯ ಪಕ್ಷಗಳು ಮತ್ತು ರೈತ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡಿರುವ ಜನತಾ ಸಮಿತಿಗಳನ್ನು ನೇಮಿಸಬೇಕು. ಈ ಸಮಿತಿಗಳ ಮೇಲುಸ್ತುವಾರಿಯಲ್ಲಿ, ಸಾಕಷ್ಟು ಉದ್ಯೋಗಾವಕಾಶಗಳು ನಿರ್ಮಾಣವಾಗುವಂತೆ ರಾಷ್ಟ್ರೀಯ ಪರಿಹಾರ ಮತ್ತು ಉದ್ಯೋಗ ಯೋಜನೆಯನ್ನಯ ಪರಿಣಾಮಕಾರಿ ಹೆಜ್ಜೆಗಳನ್ನು ತಕ್ಷಣ ಕೈಗೊಳ್ಳುವಂತೆಯೂ, ಪರಿಹಾರ ಕಾರ್ಯ ಸಮರ್ಥವಾಗಿಯೂ, ನಿಷ್ಪಕ್ಷಪಾತವಾಗಿಯೂ ನೆರವೇರುವಂತೆ ನೋಡಿಕೊಳ್ಳಬೇಕು.

ಸಮಸ್ಯೆಯ ತೀವ್ರತೆಯನ್ನು ನೋಡಿದರೆ, ಅದನ್ನು ಸಮರ್ಥವಾಗಿ ಎದುರಿಸುವುದಕ್ಕೆ ಸರ್ಕಾರದ ಪ್ರಯತ್ನವೊಂದೇ ಸಾಲದೆನ್ನುವುದನ್ನು ಕಿಸಾನ್ ಸಭಾ ಸಮ್ಮೇಳನ ತನ್ನ ರಾಜ್ಯ ಮತ್ತು ಜಿಲ್ಲಾ ಸಮಿತಿಗಳ ಗಮನಕ್ಕೆ ತಂದಿದೆ. ಹಾಗಾಗಿ ಮೇಲೆ ಹೇಳಲಾದ ಬೇಡಿಕೆಗಳ ನೆಲೆಯಲ್ಲಿ ಸಂಯುಕ್ತ ಚಳುವಳಿ ನಡೆಸುವುದರ ಜೊತೆಗೆನೇ ಸಂಬಂಧಪಟ್ಟ ಸಮಿತಿಗಳು ಇತರ ಸಾಮೂಹಿಕ ಸಂಘಟನೆಗಳ ಸಹಕಾರದೊಂದಿಗೆ ಪರಿಹಾರ ಕಾರ್ಯಕ್ಕೆ ಧಾವಿಸಬೇಕೆಂದೂ ಕರೆನೀಡಿದೆ.

○

ಎಡರಂಗ ಸರಕಾರದ ಬರ ಪರಿಹಾರ ಕ್ರಮ

(2ನೇ ಪುಟದಿಂದ)

ಲ್ಲಿ ಖಾಯಂ ಕಾಮಗಾರಿಗಳಲ್ಲಿ ಉದ್ಯೋಗ ಸೃಷ್ಟಿಯ ಕೆಲಸ ಭರದಿಂದ ಸಾಗಿತು. ಮೊದಲು ಪ್ರತಿ 400 ಹಳ್ಳಿಗರಲ್ಲಿ ಒಬ್ಬರಿಗೆ ಉಚಿತ ಆಹಾರ ನೆರವು ನೀಡಿದರೆದ್ದರೆ ಈ ಸಮಯದಲ್ಲಿ ಅದನ್ನು 8-0 ಪಟ್ಟು ಹೆಚ್ಚಿಸಿ ಪಡಿತರದ ಮೂಲಕ ಹೆಚ್ಚು ಆಹಾರ ಧಾನ್ಯ ಪೂರೈಕೆ ಮಾಡಲಾಯಿತು.

ಹೀಗೆ ಎಡರಂಗ ಸರ್ಕಾರ ಬರವನ್ನು ಎದುರಿಸುವಲ್ಲಿ ತಳೆದ ಒಟ್ಟಾರೆ ದೃಷ್ಟಿಕೋನ ಉಳಿದ ಸರ್ಕಾರಗಳಿಗಿಂತ ಭಿನ್ನವಾಗಿತ್ತು ಮಾತ್ರವೇ ಅಲ್ಲ ಅದನ್ನು ಕಾರ್ಯರೂಪಕ್ಕೆ ತರುವಲ್ಲಿಯೂ ವಿವಿಧ ಜನಸಮೂಹಗಳನ್ನು, ವಿಶೇಷತಃ ದುಡಿಯುವ ಜನಗಳನ್ನು, ಅವರ ಸಮರಧೀರ ಸಂಘಟನೆಗಳನ್ನು, ಪ್ರಜಾಸತ್ತಾತ್ಮಕವಾಗಿ ಚುನಾಯಿಸಲ್ಪಟ್ಟ ಪಂಚಾಯತುಗಳನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವುದು ಅದಕ್ಕೆ ಸಾಧ್ಯವಾಯಿತು. ತನ್ಮೂಲಕ ಸಂಪನ್ಮೂಲಗಳ ಪೂರ್ಣ ಬಳಕೆ ಸಾಧ್ಯವಾಯಿತು. ವಿವಿಧ ಯೋಜನೆಗಳ, ಕಾರ್ಯಕ್ರಮಗಳ ಲಾಭ ಎಲ್ಲೂ ಸೋರಿಹೋಗದಂತೆ ಪಂಚಾಯತುಗಳು ಮುತುವರ್ಜಿವಹಿಸಿದವು. ಸುಸಂಘಟಿತ ಜನತೆ "ನಾವು ಗೆದ್ದೇ ಗೆಲ್ಲುವೆವು" ಎಂಬ ಆತ್ಮ ವಿಶ್ವಾಸದಿಂದ ಈ ನೈಸರ್ಗಿಕ ವಿಪತ್ತನ್ನು ಎದುರಿಸಿತು.

ಒಬ್ಬನಾದರೂ ಹಳ್ಳಿ ಬಿಟ್ಟು ಬರಲಿಲ್ಲ

ಶತಮಾನದ ಈ ಅತ್ಯಂತ ಭಯಾನಕ ಪ್ರಾಕೃತಿಕ ಆಪತ್ತಿನ ವಿರುದ್ಧ ಹೋರಾಡುವಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ನೀಡಿದ ಸಮರ್ಥ ನಾಯಕತ್ವ ಪ್ರವಾಹ, ಮುಂತಾದ ವಿನಾಶಕಾರಿ ಆಪತ್ತುಗಳ ವಿರುದ್ಧ ಹೋರಾಡುವುದು ಕೇವಲ ಒಂದು ಸುಸಂಘಟಿತ ಜನತೆಗೆ ಮಾತ್ರ ಸಾಧ್ಯ ಎಂಬುದನ್ನು ಸಂಶಯಕ್ಕೆಡೆಯಿಲ್ಲದಂತೆ ಸಾಧಿಸಿ ಸೀಮಿತ ಸಂಪನ್ಮೂಲಗಳ ನಡುವೆಯೂ ಪಶ್ಚಿಮ ಬಂಗಾಳದ ಸರ್ಕಾರಕ್ಕೆ ಜನ ಸಾಮಾನ್ಯರ ಬೆಂಬಲಕ್ಕೆ ನಿಂತು "ನಿಮ್ಮೆಲ್ಲರ ಮನೆಗಳಲ್ಲಿ ನನ್ನ ಕಣಜ ತುಂಬಿರುತ್ತದೆ" ಎಂದು ಕವಿ ರವೀಂದ್ರರೊಡನೆ ಘೋಷಿಸಲು ಸಾಧ್ಯವಾಯಿತು, ನಲ್ವತ್ತು ವರ್ಷಗಳ ಹಿಂದೆ ಬರಗಾಲವನ್ನು ನಡುಗಿಸಿದ್ದ ಭೀಕರ ಅನಾವೃಷ್ಟಿಯಲ್ಲಿ 35 ಲಕ್ಷ ಗ್ರಾಮಸ್ಥರು ತಮ್ಮ ಮನೆ ಮಾರು ಬಿಟ್ಟು ಕಲ್ಕತೆಯ ಹಾಗೂ ಇತರ ನಗರಗಳ ಹಾದಿ ಬೀದಿಗಳಲ್ಲಿ ಹಸಿವಿನಿಂದ ನರಳಿ ಸತ್ತರು. ಆದರೆ ಈ ಬಾರಿ ಸುಸಂಘಟಿತ ಜನತೆ ಹೀಗಾಗಲು ಯಾವ ಅವಕಾಶವನ್ನೂ ಕೊಡಲಿಲ್ಲ. ಹಸಿವು, ಅರೆ ಹಸಿವು ಅಥವಾ ಪೋಷಕಾಂಶಗಳ ಕೊರತೆಯಿಂದ ಒಬ್ಬನೇ ಒಬ್ಬನೂ ಸಾಯಲಿಲ್ಲ, ಒಬ್ಬನಾದರೂ ಹಳ್ಳಿಗನಿಗೆ ಮನೆ ಮಾರು ಬಿಟ್ಟು ನಗರದತ್ತ ವಲಸೆ ಹೋಗುವ ಪರಿಸ್ಥಿತಿ ಬರಲಿಲ್ಲ.

○

ಬರಗಾಲ ಮತ್ತು ಕಾರ್ಮಿಕರು

ನಗರದ ಶ್ರಮದ ಮಾರುಕಟ್ಟೆಗೆ ಕೂಡ ಬಂದು ಬೀಳುವ ಬರಗಾಲ ಪೀಡಿತ ಪ್ರದೇಶದ ಕಾರ್ಮಿಕರು ಹಾಗೂ ರೈತರು ನಗರದ ಶ್ರಮಿಕರ ಕೂಲಿ ಹೆಚ್ಚಳಕ್ಕೂ ಅಂತಕವಾಗುವರು.

ಕುಶಲ ಕಾರ್ಮಿಕರಾದ ಇವರ ಬರವಿನಿಂದ ಕಟ್ಟಡ ಕಂಟ್ರಾಕ್ಟರ್‌ಗಳಿಗೆ ಇನ್ನುಳಿದ ಇಂತಹದೇ ಉದ್ಯಮಗಳಲ್ಲಿ ಸುಗ್ಗಿಯೋ ಸುಗ್ಗಿ. ಜೊತೆಗೆ, ಸರಪಳಿ ಕ್ರಿಯೆಯ ಮೂಲಕ ಸುತ್ತಿ ಬಳಸಿ ಕುಶಲ ಕೆಲಸಗಾರರು ಮೊದಲಾದವರ ವೇತನದ ಮೇಲೆಯೂ ಅಗೋಚರ ಪರಿಣಾಮ ಬೀರುತ್ತದೆ.

ನಿಶ್ಚಿತವೇತನದ ಕಾರ್ಮಿಕರು, ನೌಕರರು ಬರಗಾಲಕ್ಕೂ ತಮಗೂ ಏನೂ ಸಂಬಂಧವಿಲ್ಲವೆಂದು ತಿಳಿದಿದ್ದಾರೆ. ಅದರಲ್ಲಿ ಮುಖ್ಯವಾಗಿ, ಇದೇ ಸಮಯವೆಂದು, ಹಿಂದೆಂದೋ ಅಗ್ಗವಾಗಿ ಕೊಂಡ ಧಾನ್ಯಗಳನ್ನು ಬಚ್ಚಿಟ್ಟು ಕಾದು ಕೂತ ವಣಿಕರು ಧಾನ್ಯದ ಬೆಲೆಯನ್ನು ಏರಿಸದೆ ಬಿಡುವುದುಂಟೆ? ಇದು ಸ್ವಲ್ಪ ಮಟ್ಟಿಗೆ ಶೀಘ್ರದಲ್ಲಿಯೇ ತೋರುವ ಬರಗಾಲದ ಪರಿಣಾಮವಾದರೆ ಮತ್ತೊಂದು, ಗ್ರಾಮೀಣ ಪ್ರದೇಶದಲ್ಲಿ ಕೊಳ್ಳುವ ಶಕ್ತಿಯ ತೀವ್ರ ಕುಸಿತದಿಂದ, ನಗರಗಳಲ್ಲಿ ಕೂಡ ಕೊಳ್ಳುವ ಶಕ್ತಿ ಕುಗ್ಗುವುದರಿಂದ ಸಿದ್ಧವಸ್ತುಗಳ ಮಾರುಕಟ್ಟೆ ಕುಗ್ಗುವುದು ಸ್ವಾಭಾವಿಕ. ಇದು ಕಾರ್ಖಾನೆಗಳು ಮುಚ್ಚುವುದಕ್ಕೆ ಮತ್ತಷ್ಟು ಲಕ್ಷ ಕಾರ್ಮಿಕರು ಬೀದಿಗೆಸೆಯಲ್ಪಡುವುದಕ್ಕೆ ಕಾರಣವಾಗುತ್ತದೆ. ಇದು ಬರಗಾಲ ನೇರವಾಗಿ ಕೈಗಾರಿಕಾ ಕಾರ್ಮಿಕರ ಮೇಲೆ ಪರಿಣಾಮ ಬೀರುವ ಕ್ರೂರ ರೀತಿ.

ಪ್ರವಾಹ ಮತ್ತು ಬರಪೀಡಿತ ಜನತೆಗೆ ತುರ್ತು ನೆರವು ನೀಡಿ

— ಅಖಿಲ ಭಾರತ ಕಿಸಾನ್ ಸಭಾ

[ಮಿಡ್ನಾಪುರದ 23ನೇ ಸಮ್ಮೇಳನದ ನಿರ್ಣಯ]

ದೇಶದ ಹಲವೆಡೆ ಅಗಾಧ ಪ್ರಮಾಣದಲ್ಲಿ ಅನಾಹುತವುಂಟು ಮಾಡಿರುವ ಕ್ಷಾಮ ಪರಿಸ್ಥಿತಿಗೆ ಮತ್ತು ಇತ್ತೀಚೆಗೆ ಅನೇಕ ಪ್ರದೇಶಗಳಲ್ಲಿ ಪ್ರವಾಹಗಳಿಂದ ಸಂತ್ರಸ್ತರಾಗಿರುವ ಜನತೆಯ ಸಂಕಷ್ಟಗಳ ಕುರಿತು ಅಖಿಲ ಭಾರತ ಕಿಸಾನ್ ಸಭಾದ ಇಪ್ಪತ್ತಾಲ್ಕನೇ ಅಧಿವೇಶನವು ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರದಿಂದ ನಿಕೃಷ್ಟ ಪರಿಹಾರ

ಇಂತಹ ಪ್ರಕೃತಿ ವಿಕೋಪಗಳಿಂದ ಸಂಕಟಕ್ಕೆ ಸಿಕ್ಕಿಕೊಳ್ಳುವವರು, ಸಾಮಾನ್ಯವಾಗಿ ಮಳೆ ಆಶ್ರಿತ ಪ್ರದೇಶದಲ್ಲಿ ಅಥವಾ ನೆರೆಪೀಡಿತ ಪ್ರದೇಶಗಳಲ್ಲಿ ಅತ್ಯಂತ ತಗ್ಗಿನಲ್ಲಿ ತುಂಡು ಭೂಮಿ ಹೊಂದಿದ, ಕೆಲಸವೇನೂ ಸಿಗದೆ, ತಮ್ಮದೆಲ್ಲವನ್ನೂ ಕಳೆದುಕೊಳ್ಳುವ ಕೃಷಿ ಕೂಲಿಗಾರರು ಹಾಗು ಸಣ್ಣ ರೈತರೇ. ಸರಕಾರದ ಯಾವುದೇ ಪರಿಹಾರ ಕ್ರಮಗಳು ಇವರನ್ನು ತಾಗುವುದೇ ಇಲ್ಲ. ನಿತ್ಯ ಉಪವಾಸದ ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಿದರಂತೂ, ಆಹಾರಕ್ಕೆ ಬದಲು ಗುಂಡಿನ ಸುರಿಮಳೆಯಷ್ಟೆ ಇವರಿಗೆ ಸಿಗುವುದು. ಇಂತಹ ಅನೇಕ ವರದಿಗಳಿವೆ. ಅನೇಕ ರಾಜ್ಯಗಳಲ್ಲಿ ಕೊಡುವ ಅಲ್ಪ ಪರಿಹಾರವನ್ನು ಆಳುವ ಪಕ್ಷದ ಬೆಂಬಲಿಗರು, ಅದರ ಸ್ಥಳೀಯ ವಿಧಾನ ಸಭಾ ಸದಸ್ಯರ ಹಿಂಬಾಲಕರಿಗೇ ನೀಡಿ ಪರಿಹಾರದ ಅಗತ್ಯವಿರುವ ಬಡಜನಗಳಿಗೆ ವಂಚಿಸಲಾಗುತ್ತಿದೆಯೆಂಬ ವರದಿಗಳಿವೆ.

ಕ್ಷಾಮ ಡಾಮರಗಳಿಂದ ನೊಂದಿರುವ ಜನಕ್ಕೆ ಪರಿಹಾರ ನೀಡುವಲ್ಲಿ ಕೇಂದ್ರ ಸರಕಾರ ತೋರ್ಪಡಿಸಿರುವ ವಿಳಂಬ ನೀತಿ, ಸ್ವಜನ ಪಕ್ಷ ಪಾತ, ಮತ್ತು ಬೇರೆ ಬೇರೆ ರಾಜ್ಯ ಹಾಗೂ ಪ್ರದೇಶಗಳ ನಡುವೆ ಅದು ಅನುಸರಿಸುತ್ತಿರುವ ತಾರತಮ್ಯವನ್ನು ಅ ಬಾ. ಕಿಸಾನ್ ಸಮ್ಮೇಳನ ಖಂಡಿಸಿದೆ.

ಕೇಂದ್ರ ಸರ್ಕಾರ ನೀಡುತ್ತಿರುವ ಪರಿಹಾರ ತೀರಾ ನಿಕೃಷ್ಟ ಪ್ರಮಾಣದ್ದಾಗಿದ್ದು ಅದು ಸಮಸ್ಯೆಯ ಗಂಭೀರತೆಯನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಗಿರುವುದರ ಕುರಿತೂ ಕಿಸಾನ್ ಸಭಾದ ಸಮ್ಮೇಳನ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಬರಗಾಲ ಮತ್ತು ಪ್ರವಾಹದಿಂದ ಪೀಡಿತವಾಗಿರುವ ರಾಜ್ಯಗಳು ಪರಿಹಾರ ಕಾರ್ಯಕ್ರಮಗಳಿಗಾಗಿ ಕೇಳಿರುವ ನೆರವಿಗೂ ಕೇಂದ್ರ ಸರ್ಕಾರ ನೀಡುತ್ತಿರುವುದಕ್ಕೂ ಅಜಗಜಾಂತರವಿದೆ. ಉದಾಹರಣೆಗೆ ಪ. ಬಂಗಾಳವು ಪ್ರತಿ ತಿಂಗಳೂ 3 70ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಬೇಕೆಂದು ಕೇಳಿಕೊಂಡಿದ್ದರೆ, ಕೇಂದ್ರ ಸರ್ಕಾರ ನೀಡುತ್ತಿರುವುದು ಕೇವಲ 2-2.0 ಲಕ್ಷ ಟನ್ನುಗಳು ಮಾತ್ರ.

ಬರ ಪರಿಹಾರ ಮತ್ತು ಪ್ರವಾಹ ಪೀಡಿತ ಪ್ರದೇಶಗಳ ಬಗ್ಗೆ ರಾಜ್ಯ ಸರ್ಕಾರಗಳು ಕೇಂದ್ರಕ್ಕೆ ಕಳುಹಿಸುವ ವರದಿಗಳನು ಪರಿಶೀಲಿಸುವಲ್ಲಿ ಕೇಂದ್ರವು ತುಂಬಾ ವಿಳಂಬ ಮಾಡುತ್ತಿದೆ. ಅಧ್ಯಯನ ತಂಡಗಳನ್ನು ಕಳುಹಿಸುವಾಗ, ಈ ತಂಡಗಳು ನೀಡಿದ ವರದಿಯನ್ನು ಪರಿಶೀಲಿಸುವಾಗ ಮತ್ತು ಪರಿಹಾರ ಕಾರ್ಯಕ್ರಮಗಳಿಗಾಗಿ ಹಣವನ್ನು ಬಿಡುಗಡೆ ಗೊಳಿಸುವಲ್ಲೂ ಸಹ ಆಗುತ್ತಿರುವ ವಿಳಂಬ ಅಪಾರ. ಇದರಿಂದಾಗಿ ಪರಿಸ್ಥಿತಿ ತೀವ್ರ ಹದಗೆಟ್ಟಿರುವ ಪ್ರದೇಶಗಳಲ್ಲೂ ಪರಿಹಾರಕಾರ್ಯ ಪ್ರಾರಂಭಿಸುವಲ್ಲಿ ಸಾಕಷ್ಟು ತೊಂದರೆಗಳಾಗುತ್ತಿವೆ. ಈ ಕಡೆಗೆ ಕೇಂದ್ರ ಸರ್ಕಾರ ತುರ್ತು ಗಮನ ಹರಿಸಬೇಕಾದ ಅಗತ್ಯವಿದೆ.

ಅನಾವೃಷ್ಟಿ ಪೀಡಿತ ಅನೇಕ ಪ್ರದೇಶಗಳಲ್ಲಿ ಬೆಳೆಗಳು ಸಂಪೂರ್ಣ ನಾಶವಾಗಿವೆ. ಹೆಚ್ಚಿನ ಕಡೆ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವು ದೊರೆಯುತ್ತಿಲ್ಲ. ಇದರಿಂದಾಗಿ ರಾಜಸ್ತಾನ, ಬಿಹಾರ ಮತ್ತಿತರ ರಾಜ್ಯಗಳ ಲಕ್ಷಾಂತರ ಜನರು ಉದ್ಯೋಗ, ಆಹಾರ ಮತ್ತು ಮೇವನ್ನು ಅರಸಿ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ವರದಿ ಆಗಿದೆ.

ಬರಪರಿಸ್ಥಿತಿ ಮತ್ತು ಕೆಲವೆಡೆ ಪ್ರವಾಹದಿಂದಾಗಿ ಈ ವರ್ಷ ಆಹಾರ ಧಾನ್ಯ ಅಂದಾಜು ಉತ್ಪಾದನೆ ಕನಿಷ್ಠಪಕ್ಷ 20 ಮಿಲಿಯಟನ್ನುಗಳಷ್ಟು ಕಡಿಮೆಯಾಗಲಿದೆ. ಆಂಧ್ರಪ್ರದೇಶದಲ್ಲಿ ಈ ಕೊರತೆ 5 2 ಮಿಲಿಯ ಟನ್ನುಗಳಷ್ಟಾಗಬಹುದೆಂದೂ, ಬಿಹಾರದಲ್ಲಿ 4 ಮಿಲಿಯ, ಪ. ಬಂಗಾಳದಲ್ಲಿ 2.5 ಮಿಲಿಯ, ತಮಿಳು ನಾಡಿನಲ್ಲಿ 2 3 ಮಿಲಿಯ, ಒರಿಸ್ಸಾದಲ್ಲಿ 2 ಮಿಲಿಯ ರಾಜಸ್ಥಾನ, ಹರಿಯಾಣ, ಪಂಜಾಬ್ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ತಲಾ ಒಂದು ಮಿಲಿಯ ಟನ್ನುಗಳಷ್ಟು ಉತ್ಪಾದನೆ ಕಡಿಮೆಯಾಗುವುದೆಂದೂ ಶಂಕಿಸಲಾಗಿದೆ. ಹಿಂಗಾರು ಬೆಳೆಯ ಉತ್ಪಾದನಾ ಸಾಧ್ಯತೆಗಳೂ ನಿರಾಶಾದಾಯಕ.

ಆಹಾರ–ಪ್ರಥಮ ಅವಶ್ಯಕತೆ

ಆಹಾರ ಧಾನ್ಯಗಳ ನಿರೀಕ್ಷಿತ ಉತ್ಪಾದನೆಯಲ್ಲಿ ಇಷ್ಟೊಂದು ಕಡಿತವುಂಟಾಗುವ ಸಾಧ್ಯತೆಯಿದ್ದರೂ ಇದೀಗ ಮಾರುಕಟ್ಟೆಗೆ ಬರುತ್ತಿರುವ ಹೆಚ್ಚುವರಿ ಆಹಾರ ಧಾನ್ಯಗಳನ್ನು ಕೊಂಡು ಕೊಂಡು ಅವುಗಳನ್ನು ವಿಸ್ತೃತ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರಬರಾಜುಮಾಡುವ ಮತ್ತು ಆ ಮೂಲಕ ಏರಬಹುದಾದ ಬೆಲೆಗಳನ್ನು ಹದ್ದುಬಸ್ತಿನಲ್ಲಿಡುವ ಯಾವುದೇ ಉಪಕ್ರಮವನ್ನು ಕೇಂದ್ರ ಸರಕಾರ ಈವರೆಗೂ ಕೈಗೊಂಡಿಲ್ಲ.

[6ನೇ ಪುಟ ನೋಡಿ]

ಗಿರಾಕಿ ಹಚ್ಚ್ಯಾರ ಕೌದಿಗಿ....

ಬಿಕ್ಕಟ ಬಂತ್ರಿ ಸಂಕಟ ಜನರಿಗಿ
ಮುಂಕಟ ಮಾರ್‍ವ್ಯಾರ ಗಂಗಾಳ ಚರಿಗಿ
ಹೊರ್ಸ್ಸ, ತೊಟ್ಟಿಲ ತಟ್ಟಿ ಬಾಗಿಲ
ಗಿರಾಕಿ ಹಚ್ಚ್ಯಾರ ಕೌದಗಿ

ಬ್ರಿಟಿಷರ ಕಾಲದಲ್ಲಿ

ಸಾಹೇಬರು ಸರ್ದಾರರು ಅಂಗ್ರೇಜು ಜಾಗಿರಿ
ಕಾಗದ ಬರಿತಾರ ರಾಣಿಗಿ
ಕಾಳ ಖರೀದಿ ಮಾಡಿ ಕಳಿಸಿರಿ
ಬರ ಬಿದ್ದಾದ ಈ ನಾಡಿಗಿ

[ಇಂದು ಕೇಂದ್ರ ಸರ್ಕಾರವಿದುರು ರಾಜ್ಯ ಸರ್ಕಾರಗಳು ಮನವಿಯ ಮೇಲೆ ಮನವಿ ಬರೆಯುತ್ತಿರುವ ಕತೆ ಇದೇ]

ಪಂಜಾಬ್ ಪರಿಸ್ಥಿತಿ; ದೃಢ ನಿಲುವು ತಳೆಯಬೇಕಾಗಿದೆ

ಪಾಲಿಟ್‌ಬ್ಯೂರೋ ಹೇಳಿಕೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ತೀವ್ರವಾದಿಗಳ ಕೈ ಮೇಲಾಗುತ್ತಿರುವ ಪಂಜಾಬಿನ ಅಪಾಯಕಾರೀ ಸ್ಥಿತಿಯ ಬಗ್ಗೆ ತನ್ನ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ಅಕಾಲೀ ಮುಖಂಡತ್ವದ ಚಂಚಲ ಹಾಗೂ ರಾಜೀ ನಿಲುವು ಹಾಗೂ ರಾಷ್ಟ್ರ ವಿರೋಧಿ ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಹೋರಾಡುವಲ್ಲಿ ದೃಢತೆಯ ಅಭಾವ ಇವುಗಳಿಂದಾಗಿ ಅದು ಒಂದಾದ ಮೇಲೊಂದರಂತೆ ರಾಜಿ ಮಾಡಿಕೊಳ್ಳಬೇಕಾಗಿ ಬಂದಿದೆ. ಅಕಾಲೀ ಪಕ್ಷಕ್ಕೆ ಪಂಜಾಬ್ ಇತ್ಯರ್ಥವನ್ನು ಕಾಪಾಡಿಕೊಂಡು ಮುಂದೊಯ್ಯಲು ಒಂದು ದೊಡ್ಡ ಅಣತಿಯನ್ನು ನೀಡಿದ ಚುನಾವಣೆ ಕಾಲದಲ್ಲಿ ಅವರಿಂದ ದೂರಗೊಳಿಸಲ್ಪಟ್ಟ ಪ್ರತ್ಯೇಕತಾವಾದಿಗಳು ಈಗ ಹರ್ಮಿಂದಿರ್ ಸಾಹೀಬನ್ನು ಸುಮಾರಾಗಿ ವಶಪಡಿಸಿಕೊಂಡೇ ಬಿಟ್ಟಿದ್ದಾರೆ. ಹಾಗೂ ತಾವು ಏಕೈಕ ಧಾರ್ಮಿಕ ಅಧಿಕಾರಿಗಳು ಎಂದು ಘೋಷಿಸಿಕೊಂಡು ಬಿಟ್ಟಿದ್ದಾರೆ.

ಅಕಾಲೀ ಮುಖಂಡತ್ವ ಹಾಗೂ ಅದರ ನೇತೃತ್ವದ ಸರಕಾರ ತಮ್ಮ ಡೋಲಾಯಮಾನತೆಯಿಂದಾಗಿ ಜನತೆಯ ಹಾಗೂ ದೇಶದ ಕೈ ಬಿಟ್ಟು ರಾಷ್ಟ್ರೀಯ ಐಕ್ಯತೆಗೆ ಹಾನಿಯುಂಟು ಮಾಡುತ್ತಿದ್ದಾರೆ. ಖಾಲಿಸ್ತಾನ ಹಾಗೂ ಸಿಖ್ ಧರ್ಮದ ಹೆಸರಿನಲ್ಲಿ ಮಾತನಾಡುವ ಪ್ರತ್ಯೇಕತಾವಾದಿಗಳು ಭಾರತದ ಬಾಹ್ಯ ಶತ್ರುಗಳ ಸಾಧನಗಳು ಮತ್ತು ಅವರಿಗೆ ವಿದೇಶದಿಂದ ಹಣ ಸಹಾಯ ಹಾಗೂ ತರಬೇತಿ ದೊರೆಯುತ್ತಿದೆ ಎಂಬುದನ್ನು ಅಕಾಲೀ ನಾಯಕತ್ವ ಗಣನೆಗೆ ತಗೊಳ್ಳುತ್ತಿಲ್ಲ

ಪರಿಸ್ಥಿತಿ ಹದಗೆಡುತ್ತಿರುವುದಕ್ಕೆ ಕಾಂಗ್ರೆಸ್ (ಐ) ಪಕ್ಷ ಹಾಗೂ ಕೇಂದ್ರ ಸರಕಾರವೂ ಜವಾಬ್ದಾರಿ. ಚಂಡೀಘಡದ ವರ್ಗಾವಣೆಯಲ್ಲಿ ವಿಳಂಬ ಪ್ರತ್ಯೇಕತಾವಾದಿಗಳಿಗೆ ಇತ್ಯರ್ಥವನ್ನು ಜರಿಯಲು ಹಾಗೂ ಅದಕ್ಕೆ ಸಹಿ ಮಾಡಿದವರ ಬಗ್ಗೆ ಸಂಶಯವುಂಟು ಮಾಡಲು ನೆರವಾಗುತ್ತಿದೆ. ಹರ್‍ಯಾಣಾದ ಕಾಂಗ್ರೆಸ್ (ಐ) ಮುಖ್ಯಮಂತ್ರಿ ಭಜನ್‌ಲಾಲ್‌ರ ಬಹಿರಂಗ ಸಂಕುಚಿತ ಹೇಳಿಕೆಗಳು ಬೆಂಕಿಗೆ ತುಪ್ಪ ಸುರಿದಿವೆ. ಕೇಂದ್ರದ ಕಾಂಗ್ರೆಸ್ [ಐ) ಪಕ್ಷಕ್ಕೆ ಭಜನ್ ಲಾಲರನ್ನು ಅಂಕೆಯಲ್ಲಿರಿಸಿಕೊಳ್ಳಲು ಸಾಧ್ಯವಾಗದಿದ್ದರೆ ದೇಶವನ್ನು ಒಗ್ಗಟ್ಟಿನಲ್ಲಿಡುವ ಮಾತನಾಡುವುದನ್ನು ಅದು ಬಿಡಬೇಕು. ಭಜನ್ ಲಾಲ್‌ರ ಸಂಕುಚಿತ, ರಾಷ್ಟ್ರ-ವಿರೋಧಿ ಭಂಡತನಕ್ಕೆ ಕಾಂಗ್ರೆಸ್ (ಐ) ಹೈಕಮಾಂಡಿನ ಮೌನ ಒಪ್ಪಿಗೆಯಿಲ್ಲ ಎಂದು ನಂಬುವುದು ಕಷ್ಟ

ಅಬೋಹರ್—ಫಾಜಿಲ್ಕಾದ ಪ್ರಶ್ನೆಯನ್ನು ಚಂಡೀಘಡದ ವರ್ಗಾವಣೆಯೊಂದಿಗೆ ಕಲಸುಮೇಲೋಗರ ಮಾಡಲು ಕಾರಣಗಳೇನೂ ಇರಲಿಲ್ಲ. ಚಂಡೀಘಡದ ಬದಲಾಗಿ ವರ್ಗಾಯಿಸಬೇಕಾಗಿದ್ದ ಹಳ್ಳಿಗಳು ಯಾವುದೆಂದು ಒಪ್ಪಂದದಲ್ಲಿ ನಮೂದಿಸಿದ ಸಮಿತಿಗೇನ್ನು ಗಮನದಲ್ಲಿಟ್ಟುಕೊಂಡು ಗುರುತಿಸಬೇಕಾಗಿತ್ತು. ಮ್ಯಾಥ್ಯೂ ಆಯೋಗ ಸಮಯಕ್ಕೆ ಸರಿಯಾಗಿ ತನ್ನ ಇತ್ಯರ್ಥ ನೀಡಬಹುದಾಗಿತ್ತು. ಜಲ ಆಯೋಗವನ್ನು ಈ ಮೊದಲೇ ನೇಮಿಸಿ ಅದು ಇಷ್ಟರೊಳಗೆ ತನ್ನ ತೀರ್ಪು ಕೊಡಬಹುದಾಗಿತ್ತು. ಮತ್ತು ಚಂಡೀಘಡವನ್ನು ಒಪ್ಪಿತ ದಿನದಂದು ಆದರೆ ಬದಲಾಗಿ ಗಡಿ ಸಮೀಪದ ಹಿಂದೀ ಮಾತನಾಡುವ ಹಳ್ಳಿಗಳೊಂದಿಗೆ ವರ್ಗಾಯಿಸಬಹುದಾಗಿತ್ತು. ಹಲವು ಅಮೂಲ್ಯ ತಿಂಗಳು ಕಳೆದು ಹೋದವು. ಮತ್ತು ದೇಶ ಮತ್ತೆ ಬಿಕ್ಕಟ್ಟು ಎದುರಿಸುತ್ತಿದೆ.

ರಾಜೀವ್ ಗಾಂಧಿ ಸರಕಾರ ಆಳುವ ಪಕ್ಷದ ಒಂದುವಿಭಾಗದ ಒತ್ತಡದಿಂದಾಗಿ ಇತ್ಯರ್ಥವನ್ನು ಜ್ಯಾರಿಗೊಳಿಸುವಲ್ಲಿ ತನ್ನ ಪೂರ್ಣ ದಿವಾಳಿಕೋರತನವನ್ನು ಹಾಗೂ ಅಸಮರ್ಥತೆಯನ್ನು ಬಯಲುಗೊಳಿಸಿಕೊಂಡಿದೆ. ಹರ್‍ಯಾಣಾದ ಕೆಲವು ವಿರೋಧ ಪಕ್ಷಗಳೂ ಈ ರಾಷ್ಟ್ರ ವಿರೋಧಿ ಆಟವಾಡಿದ್ದಾವೆಯೆಂಬುದನ್ನು ಕೂಡ ಇಲ್ಲಿ ಸೇರಿಸಬಹುದು ಇದರಲ್ಲಿ ಮಧ್ಯ ಪ್ರವೇಶಿಸಿ ಇತ್ಯರ್ಥದ ಶರತ್ತುಗಳನ್ನು ಜ್ಯಾರಿಗೊಳಿಸುವಂತೆ ನೋಡಿಕೊಳ್ಳಬೇಕೆಂದು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳಿಗೆ ಪಾಲಿಟ್‌ಬ್ಯೂರೋ ಕರೆ ನೀಡುತ್ತದೆ. ಅಕಾಲೀ ಮುಖಂಡತ್ವ ತನ್ನ ಹೂಗುಯ್ಯಾಲೆ ನಿಲುವನ್ನು ಬಿಟ್ಟುಕೊಟ್ಟು ಪ್ರತ್ಯೇಕತಾವಾದಿಗಳ ವಿರುದ್ಧ ಒಂದು ದೃಢ ನಿಲುವು ತಳೆಯಬೇಕೆಂದು ಹಾಗೂ ಪ್ರತ್ಯೇಕತಾವಾದಿಗಳನ್ನು ಪ್ರತ್ಯೇಕಿಸಿ ಅವರನ್ನು ಜನತೆಯ ಬೆಂಬಲದಿಂದ ಸೋಲಿಸಬೇಕೆಂದು ಕೂಡಾ ಪಾಲಿಟ್‌ಬ್ಯೂರೋ ಕರೆ ನೀಡುತ್ತದೆ.

ಇದರಲ್ಲಿ ಅಕಾಲೀ ಮುಖಂಡತ್ವಕ್ಕೆ ಇತ್ಯರ್ಥದ ಶರತ್ತುಗಳನ್ನು ವಿಳಂಬವಿಲ್ಲದೆ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸುವ ಸಮಸ್ತ ಪ್ರಜಾಪ್ರಭುತ್ವವಾದೀ ಶಕ್ತಿಗಳ ಬೆಂಬಲವಿದೆ.

ಹೆಗ್ಡೆಯವರ ರಾಜೀನಾಮೆ - ಕೆಲವು ಪ್ರಶ್ನೆಗಳು

ರಾಮಕೃಷ್ಣ ಹೆಗ್ಡೆಯವರು ಪುನಃ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಲು ಒಪ್ಪಿ ಪ್ರತಿಜ್ಞಾ ಸ್ವೀಕಾರ ಮಾಡಿದುದು- ನಮ್ಮ ಪಕ್ಷದ ಮತ್ತು ದೇಶದ ಹಾಗೂ ರಾಜ್ಯದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮತ್ತು ವ್ಯಕ್ತಿಗಳ ಬಿನ್ನಹಕ್ಕೆ ಮಣಿದುದು— ಸ್ವಾಗತಾರ್ಹ. ಕರ್ನಾಟಕ ರಾಜ್ಯದಲ್ಲಿ ರಾಮಕೃಷ್ಣ ಹೆಗ್ಡೆಯವರು ದಿಢೀರನೇ ರಾಜೀನಾಮೆ ಕೊಟ್ಟಿದ್ದರಿಂದ ಉಂಟಾದ ಸಂದಿಗ್ಧತೆಗೆ ಒಮ್ಮೆ ತಡೆಯುನ್ನುಂಟು ಮಾಡಿದಂತಾಗಿದೆ. ಕಾಂಗ್ರೆಸ್ (ಐ) ಪಕ್ಷದ ದಿಲ್ಲಿ ಸುಲ್ತಾನರೂ, ಕರ್ನಾಟಕದ ಸುಲ್ತಾನರೂ ಒಮ್ಮಿಂದೊಮ್ಮೆಗೆ "ಮೌಲ್ಯಾಧಾರಿತ ರಾಜಕೀಯದ ಭ್ರಷ್ಟರಾಗಿ ಹಾರಾಡುವುದಕ್ಕೆ" ಪೂರ್ಣ ವಿರಾಮ ಹಾಕಿದಂತಾಗಿದೆ. ರಾಜ್ಯದ ಮತ್ತು ದೇಶದ ಇಂದಿನ ಪರಿಸ್ಥಿತಿ ಮತ್ತು ಮುಂದಿನ ಬೆಳವಣಿಗೆಯ ದೃಷ್ಟಿಯಿಂದ "ರಾಮಕೃಷ್ಣ ಹೆಗ್ಡೆಯವರು ಕರ್ನಾಟಕರಾಜ್ಯದ ಕಾಂಗ್ರೆಸ್ಸೇತರ ಸರಕಾರದ ಸಾರಥಿಯಾಗಿ ಮುಂದುವರಿಯುವುದು ಅವಶ್ಯಕವೆಂದು ಮನಗಂಡು "ರಾಜೀನಾಮೆ ಹಿಂತೆಗೆದುಕೊಳ್ಳಬೇಕೆಂದು" ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಘಟಕವು ವಿನಂತಿಸಿಕೊಂಡಿತ್ತು. ರಾಮಕೃಷ್ಣ ಹೆಗ್ಡೆಯವರು ಮುಖ್ಯಮಂತ್ರಿಯಾದುದು ನಿಜವಾಗಿ ಸಂತೋಷದಾಯಕವಾಗಿದೆ.

ಆದರೆ, ರಾಜ್ಯದ ರಾಜಕೀಯದಲ್ಲಿ ಸಂದಿಗ್ಧತೆ ಮಾತ್ರ ಇನ್ನೂ ಮುಂದುವರಿಯುತ್ತಿದೆ ಎಂಬೇ ನಮ್ಮ ಅಭಿಪ್ರಾಯ.

ರಾಮಕೃಷ್ಣ ಹೆಗ್ಡೆಯವರು ಜನಾಭಿಪ್ರಾಯಕ್ಕೆ ಮಣಿದು ಪುನಃ ಮುಖ್ಯಮಂತ್ರಿಯಾಗಲು ಒಪ್ಪಿದರು ಎಂಬುದು ಸತ್ಯವಾದರೂ ಅವರು ಯಾಕೆ ರಾಜೀನಾಮೆ ಕೊಟ್ಟರು ಎಂಬಪ್ರಶ್ನೆ ಮಾತ್ರ ಇನ್ನೂ ಯಕ್ಷ ಪ್ರಶ್ನೆಯಾಗಿಯೇ ಇದೆ. ಶ್ರೀಯುತರನ್ನು ರಾಜೀನಾಮೆ ಕೊಡಿಸಿದಂತಹ ಸ್ಥಿತಿಗತಿಗಳು, ವಿದ್ಯಮಾನಗಳು, ಸಂದರ್ಭಗಳು ಯಾವುವು ಎಂಬುದು ಮಾತ್ರ "ಅಭೇದ್ಯ"ವಾಗಿವೆ.

"ನಾನು ನಮ್ಮ ಪಕ್ಷದ ಅಧ್ಯಕ್ಷ ಚಂದ್ರಶೇಖರರಿಗೆ ಬರೆದ ಪತ್ರವು ಬಹಿರಂಗಗೊಂಡದ್ದರಿಂದಾಗಿ ನಾನು ಕರಾರುವಾಕ್ಕಾಗಿ ಅವಧಿಯಲ್ಲಿ ರಾಜೀನಾಮೆ ಕೊಡಲು ನಿರ್ಬಂಧಿತನಾದೆ" ಎಂಬ ಹೆಗ್ಡೆಯವರ ಹೇಳಿಕೆ "ರಾಜಕೀಯ ಗೇಮೋ" ಸಮಂಜಸವಾಗಿದೆಯಾದರೂ ಜನರಿಗೆ ಮಾತ್ರ ಸಮಂಜಸವಾಗಿಲ್ಲವೆಂದೇ ಹೇಳಬೇಕಾಗಿದೆ.

ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ರಾಜಕೀಯ ವಿಶ್ಲೇಷಣೆ ಮಾಡುತ್ತಿದ್ದಾರೆ. ಹೆಚ್ಚಿನವರು ಇದೊಂದು ದೊಡ್ಡ ನಾಟಕ ಎಂದು ಉದ್ಗರಿಸಿದ್ದಾರೆ. ಹೆಚ್ಚಿನವರಿಗೆ ಅದು ಹಾಗೆ ತೋರುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಆದರೆ ನಮ್ಮ ದೃಷ್ಟಿಯಲ್ಲಿ ಇದರಲ್ಲಿ ನಾಟಕೀಯತೆಗಿಂತಲೂ ಅಧಿಕವಾಗಿ ಮತ್ತು ಪ್ರಮುಖವಾಗಿ ರಾಮಕೃಷ್ಣ ಹೆಗ್ಡೆಯವರು ಆಡಳಿತೆಯನ್ನು ಮುಂದುವರಿಸಲಿಕ್ಕೆ ಎದುರಾಗಿರುವ ಅಡ್ಡಿ ಆತಂಕಗಳೇ ಕಾರಣವೆಂದು ತೋರುತ್ತದೆ. ಆ ಅಡ್ಡಿ ಆತಂಕಗಳನ್ನು ನೀಗಿಸುವುದಕ್ಕೆ ಸಾಧ್ಯವಿಲ್ಲವೆಂಬ ಮನೋನಿರ್ಧಾರಕ್ಕೆ ಹೆಗ್ಡೆಯವರು ಬಂದಿದ್ದರಿಂದಲೇ ಈ ರಾಜೀನಾಮೆಯನ್ನು ಅವರು ಕೊಟ್ಟರು ಎಂದು ತೋರುತ್ತದೆ.

ಪಿ. ರಾಮಚಂದ್ರರಾವ್

ಕಾಂಗ್ರೆಸ್ಸೇತರ ಸರ್ಕಾರವನ್ನು ಮುಂದುವರಿಸಿಕೊಂಡು ಹೋಗಿ ಕಾಂಗ್ರೆಸ್(ಐ)ಯ ಸರ್ವಾಧಿಕಾರಿ ಮತ್ತು "ಶ್ರೀಮಂತರನ್ನು ಶ್ರೀಮಂತರಾಗಿರುವ, ಬಡವರನ್ನು ಇನ್ನಷ್ಟು ಬಡವರನ್ನಾಗಿ ಮಾಡಿಕೊಂಡು ಹೋಗುವ" ನೀತಿಗಳಿಗೆ ಬದಲಿ ನೀತಿಗಳನ್ನು ಅನುಸರಿಸಿ ಜನತೆಗೆ ಉತ್ತಮ ಆಡಳಿತೆ ಕೊಡಲು "ಈಗಿನ ಸ್ಥಿತಿಗತಿಗಳಲ್ಲಿ ಸಾಧ್ಯವಿಲ್ಲ" ವೆಂಬ ನಿರ್ಧಾರಕ್ಕೆ ಶ್ರೀ ಹೆಗ್ಡೆಯವರು ಬಂದಿದ್ದರೆ ಅದರಲ್ಲಿ ಆಶ್ಚರ್ಯವೇನು ಇಲ್ಲ.

ಜನತಾ ಪಕ್ಷವೂ ಒಂದು ಬಂಡವಾಳಶಾಹಿ ಭೂಮಾಲಿಕ ವರ್ಗಗಳ ಹಿತಗಳನ್ನು ಸಾಧಿಸುವ ಪಕ್ಷವಲ್ಲವೇ? ಕಾಂಗ್ರೆಸ್ (ಐ) ಪಕ್ಷವು ಬಂಡವಾಳಶಾಹಿ ಭೂಮಾಲಿಕ ವರ್ಗಗಳ ಹಿತಗಳನ್ನು ಮೂಲಭೂತವಾಗಿ ಸಾಧಿಸುವ ಪಕ್ಷವಾಗಿರುವಾಗ "ಪರ್ಯಾಯ ನೀತಿಗಳ ಕಾಂಗ್ರೆಸ್ಸೇತರ ಸರ್ಕಾರ" ವನ್ನು ನಡೆಸುವುದು ಹೇಗೆ? ಹಾಗೆ ಪರ್ಯಾಯ ನೀತಿಗಳನ್ನು ಅನುಸರಿಸಿಕೊಂಡು ಹೋಗಲು ಜನತಾ ಪಕ್ಷದೊಳಗಿನ ಹಾಗೂ ಹೊರಗಿನ ಸ್ಥಾಪಿತ ಹಿತಾಸಕ್ತಿಗಳು ಬಿಡುತ್ತವೋ? ನಮ್ಮ ದೇಶದ ಒಟ್ಟಾರೆ ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆ ಬಿಡುತ್ತದೋ?

ರಾಮಕೃಷ್ಣ ಹೆಗ್ಡೆಯವರೆ— ಅವರೇ ಯಾಕೆ ಎನ್ ಟಿ ಆರ್., ಎಂ ಜಿ ಆರ್, ಬನಾರಸಿ— ಈವತ್ತಲ್ಲ ನಾಳೆ ಕಾಂಗ್ರೆಸ್ (ಐ) ಈ 38 ವರ್ಷಗಳು ಅನುಸರಿಸಿಕೊಂಡು ಬಂದ ನೀತಿಗಳಿಗೆ ಬದಲಿಯಾಗಿರುವ ನೀತಿಗಳನ್ನು — ಕಲ್ಕತ್ತಾದಲ್ಲಿ 17 ವಿರೋಧ ಪಕ್ಷಗಳು ಮತ್ತು 5 ಮುಖ್ಯ ಮಂತ್ರಿಗಳು ಅಂಗೀಕರಿಸಿದ 11 ಅಂಶದ ಕಾರ್ಯಕ್ರಮದಂತಹ—ಅನುಸರಿಸಿದರೆ ಮತ್ತು, ಅವರಿಗಾಗಲೀ ಇತರರಿಗಾಗಲೀ ರಾಜ್ಯದ ಆಡಳಿತೆಯನ್ನು ಕಾಂಗ್ರೆಸ್ (ಐ) ಗಿಂತ ಉತ್ತಮ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಲು ಸಾಧ್ಯ.

ಈ ರಾಜಕೀಯ ಅನುಭವವನ್ನೇ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವು ಇಂದು ದೇಶದಲ್ಲಿ ಕಾಂಗ್ರೆಸ್ (ಐ) ಅನುಸರಿಸುತ್ತಾ ಬಂದಿರುವ ನೀತಿಗಳಿಂದಲೇ ಪರಿಸ್ಥಿತಿ ಹದಗೆಡುತ್ತಾ ಇರುವುದು, ಪರಿಸ್ಥಿತಿಯಲ್ಲಿ ಬದಲಾವಣೆಯನ್ನು ತರಬೇಕಾದರೆ "ಎಡ ಪ್ರಜಾಪ್ರಭುತ್ವ ಶಕ್ತಿಗಳು ಕನಿಷ್ಟ ಪರ್ಯಾಯ ಕಾರ್ಯಕ್ರಮದ ಆಧಾರದಲ್ಲಿ ಹೋರಾಡದೇ ನಿರ್ವಾಹವಿಲ್ಲ"ವೆಂದು ಹೇಳುತ್ತಾ ಬರುತ್ತಿರುವುದಾಗಿದೆ.

ಎಷ್ಟರವರೆಗೆ ರಾಮಕೃಷ್ಣ ಹೆಗ್ಡೆ, ಎನ್ ಟಿ. ಆರ್. ಮೊದಲಾದವರಿಗೆ ಮಾರ್ಕ್ಸ್‌ವಾದೀ ಪಕ್ಷವು ಹೇಳುತ್ತಾ ಬರುತ್ತಿರುವ "ಈ ರಾಜಕೀಯ ಅನುಭವ"ವು ಮನದಟ್ಟಾಗುವುದಿಲ್ಲವೋ, ಅಷ್ಟರವರೆಗೆ ಇತ್ತೀಚೆಗೆ ಕರ್ನಾಟಕದಲ್ಲಿ ನಡೆದಂತಹ ಘಟನೆಗಳು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಹಲವಾರು ರಾಜ್ಯಗಳಲ್ಲಿ ಪುನರಾವರ್ತಿಯಾಗುತ್ತಾ ಹೋಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಇಲ್ಲಿ ಹೆಗ್ಡೆಯವರೇ ಇರಬೇಕೆಂದೂ ಹೆಗ್ಡೆಯವರು ಮುಖ್ಯ ಮಂತ್ರಿ ಸ್ಥಾನದಿಂದ ಇಳಿದರೆ ರಾಜ್ಯದ ಆಡಳಿತವನ್ನೇ ಮುಂದುವರಿಸಲು ಸಾಧ್ಯವಿಲ್ಲವೆಂದೂ "ಕೂಗು" ಏಳುವ ಹಾಗೆ, ತಮಿಳುನಾಡಿನಲ್ಲಿ "ಎಂ. ಜಿ ಆರ್. ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲೇಬೇಕೆಂದೂ", ಆಂಧ್ರದಲ್ಲಿ ಶ್ರೀ ಎನ್ ಟಿ ಆರ್. "ಒಬ್ಬರೇ ಗತಿ" ಎಂದೂ ಕೂಗು ಕೇಳುತ್ತಿರುತ್ತದೆ.

ಈ ಕೂಗಿನ ಹಿಂದೆ ಅರ್ಥವಿಲ್ಲವೆಂದಲ್ಲ ಕಾಂಗ್ರೆಸ್ (ಐ) ರಾಜ್ಯಭಾರವನ್ನು ಕಿತ್ತು ಈ ಎಲ್ಲಾ ರಾಜ್ಯಗಳಲ್ಲಿ ಈ ವ್ಯಕ್ತಿಗಳು ಮುಖ್ಯ ಮಂತ್ರಿಗಳಾಗಿದ್ದು ಕಾಂಗ್ರೆಸ್ಸೇತರ ಸರಕಾರಗಳು— ಜನತೆಯ ಆಸೆಆಕಾಂಕ್ಷೆಗಳನ್ನು ಹೊತ್ತು— ಅಧಿಕಾರಕ್ಕೆ ಬಂದಿವೆ.

ಕಾರ್ಯತಃ ಹಲವು ವರ್ಷಗಳ ಸ್ವಂತ ಅನುಭವದ ಆಧಾರದಲ್ಲಿ ಜನತೆಗೆ "ಈ ಕಾಂಗ್ರೆಸ್ಸೇತರ ಸರಕಾರಗಳಲ್ಲಿ, ಅವುಗಳು ನಡೆದುಕೊಂಡು ಬರುತ್ತಿರುವ ವೈಖರಿಯಲ್ಲಿ....ನೀತಿಗಳಲ್ಲಿ....ನಡವಳಿಕೆಗಳಲ್ಲಿ....ಕಾಂಗ್ರೆಸ್(ಐ) ಸರಕಾರಕ್ಕಿಂತ "ಭಿನ್ನತೆ" ಕಂಡು ಬರದಿರುವುದೇ ಈ ರಾಜಕೀಯ ಸಂದಿಗ್ಧತೆಗೆ ಕಾರಣ.

ಆದ ಕಾರಣ, ರಾಮಕೃಷ್ಣ ಹೆಗ್ಡೆಯವರೂ ಅವರ ಪಕ್ಷವಾದ ಜನತಾ ಪಕ್ಷವೂ, ಇನ್ನಾದರೂ ದೇಶದ ಮತ್ತು ರಾಜ್ಯದ ರಾಜಕೀಯದಲ್ಲಿ "ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ, ಶಕ್ತಿಗಳ ಮತ್ತು ವ್ಯಕ್ತಿಗಳ ಜತೆಗೂಡಿ" ಪ್ರಜ್ಞಾಪೂರ್ವಕವಾಗಿ ಜನಸಾಮಾನ್ಯರ ಆಸೆ ಆಕಾಂಕ್ಷೆಗಳ ಈಡೇರಿಕೆಗೆ ಸಹಾಯಕವಾಗುವ, ಆ ದಿಕ್ಕಿನಲ್ಲಿ ಮುನ್ನಡೆಯುತ್ತಿದ್ದೇವೆ ಎಂಬುದು ಜನಸಾಮಾನ್ಯರ ಅನುಭವಕ್ಕೆ ಬರುವಂತೆ ಆಡಳಿತೆಯನ್ನು ನಡೆಸಲು ಮುಂದಾಗಲಿ ಎಂಬುದೇ ನಮ್ಮ ಅಭಿಲಾಷೆ.

ಈ ದಿಸೆಯಲ್ಲಿ ರಾಜ್ಯದಲ್ಲಿ ಜನತಾ ಪಕ್ಷವು ರಾಮಕೃಷ್ಣ ಹೆಗ್ಡೆಯವರ ನೇತೃತ್ವದಲ್ಲಿ ಗಂಭೀರವಾದ ಹೆಜ್ಜೆಗಳನ್ನಿಡಲಿ ಎಂಬುದೇ ನಮ್ಮ ನಿರೀಕ್ಷೆ. ○

ಬರಗಾಲ ಪರಿಹಾರದ ರಾಜಕೀಯ ಅರ್ಥಶಾಸ್ತ್ರ

(3ನೇ ಪುಟದಿಂದ)

ಬಂದ ಜನ ವಿರೋಧಿ ನೀತಿಯ ಜೊತೆಗೆ ರಾಜೀವಗಾಂಧಿಯವರ ಆಧುನಿಕ ತಂತ್ರಜ್ಞಾನದ ನೀತಿ. ಅದಕ್ಕಾಗಿ ವಿಶ್ವಬ್ಯಾಂಕ್ ನಿಬಂಧನೆಗೆ ಮಣಿಯುವ ನೀತಿಯ ಫಲವಾಗಿ ಕೃಷಿ ಕಾರ್ಮಿಕರಿಗೆ ಒಂದಿಷ್ಟಾದರು ಪರಿಹಾರ ನೀಡುತ್ತಿದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (NREP) ರಾಷ್ಟ್ರೀಯ ಗ್ರಾಮೀಣ ನೀರು - ಸರಬರಾಯಿ (NRWS), Trysem, ಮೊದಲಾದ ಯೋಜನೆಗಳನ್ನು ತೀವ್ರ ಕಡಿತಗೊಳಿಸಿ, ಬಂಡವಾಳ ಶಾಹಿಗಳಿಗೆ ಸವಲತ್ತುಗಳನ್ನೊದಗಿಸಿದೆ.

ನೆಹರು"ರಾಷ್ಟ್ರದ ದೇವಾಲಯಗಳು" ಎಂದು ಕರೆದ ನೀರಾವರಿ ಯೋಜನೆಗಳನ್ನು ಮೊದಲಿಗನ ಕಾಲಕ್ಕೆ ದುಬಾರಿಯವೆಂದು ಕೈ ಬಿಡಲಾಗುತ್ತಿದೆ ಏಕೆಂದರೆ ರಾಷ್ಟ್ರದ ಬಂಡವಾಳಶಾಹಿ ವರ್ಗಕ್ಕೆ ಅವಶ್ಯಕವಾದಷು "ಹಸಿರು ಕ್ರಾಂತಿ"ಆಗಲೇ ಸಂಭವಿಸಿದೆಯಲ್ಲ ವಿಶ್ವಬ್ಯಾಂಕ್ ದೊಡ್ಡ ಪ್ರಮಾಣದಲ್ಲಿ ನೀರಾವರಿಗೆ ನೀಡುತ್ತಿದ್ದ ಹಣವನ್ನು ಟೀಗನ್-ಕ್ಲಾಸೆನ್ (ವಿಶ್ವಬ್ಯಾಂಕ್ ಅಧ್ಯಕ್ಷ) ಆಗಮನದ ನಂತರ ತೀವ್ರವಾಗಿ ಕಡಿತ ಮಾಡಿದೆ

ಹೀಗಾಗಿ, ಕಪ್ಪುಹಣದ ಬಂಡವಾಳಶಾಹಿಗಳು ಕಾಳಸಂತೆ ಕೋರರ ಮೇಲೆ ನೇರ ತೆರಿಗೆ ವಿಧಿಸಿ ಹಣ ಸಂಪನ್ಮೂಲ ರೂಢಿಸಿ ಬರಗಾಲ, ನೆರೆಯ ಖಾಯಂ ಪರಿಹಾರ ಕ್ರಮವನ್ನು ಕೈಗೊಳ್ಳಲಾಗದ ಸರಕಾರ, ಬಂಡವಾಳಶಾಹಿಗಳಿಗೆ ಪರಿಹಾರ ನೀಡಿ ಬರಗಾಲದ ಬವಣೆಗೆ ಸಿಕ್ಕಿ ಬೇಯುತ್ತಿರುವ ಜನಸಾಮಾನ್ಯರ ಮೇಲೆ ತೆರಿಗೆ ಹೇರುವ, ಬೆಲೆ ಏರಿಸುವ ಸರ್ಕಾರ ಬರಗಾಲ ಪರಿಹಾರ ಮಾಡುವುದುಂಟೆ?

ಇದಕ್ಕೆ ಪರ್ಯಾಯ ಕಾರ್ಯಕ್ರಮವನ್ನು ಕಲ್ಕತ್ತಾ ಶೃಂಗ ಸಭೆಯ ಭಾಗಿದಾರರಾದ ಎಡ ಪ್ರಜಾಸತ್ತಾತ್ಮಕ ಪಕ್ಷ, ಶಕ್ತಿಗಳ ಐಕ್ಯತೆ, ಐಕ್ಯ ಹೋರಾಟವೇ ಮದ್ದು.

ಜಿ. ಎನ್. ನಾಗರಾಜ್

(1ನೇ ಪುಟದಿಂದ)

ಯುವರ ನಾಯಕತ್ವದಲ್ಲಿ ಭಾಗವಹಿಸಿದೆ. ಸಿ. ಐ. ಟಿ. ಯು, ಎಸ್.ಎಫ್ ಐ., ಡಿ ವೈ.ಎಫ್.ಐ. ಕಾರ್ಯಕರ್ತರ ಜೊತೆಗೆ ದೊಡ್ಡ ಸಂಖ್ಯೆಯಲ್ಲಿ ಕೆಂಪು ವಸ್ತ್ರ ಧರಿಸಿದ ಜನವಾದಿ ಮಹಿಳಾ ಸಂಘಟನೆಯ ಮಹಿಳೆಯರನ್ನು ಜನ ಹರ್ಷೋದ್ಗಾರಗಳಿಂದ ಸ್ವಾಗತಿಸಿದರು.

ಈ 20,000 ಜನರ ಮೆರವಣಿಗೆಯನ್ನು ನಿಯಂತ್ರಿಸಲು ಪೋಲಿಸರೇ ಅಲ್ಲದೆ ಪ್ಯಾರಾ ಮಿಲಿಟರಿ ಪಡೆಗಳು ಸೇರಿ 20,000 ಸಿಬ್ಬಂದಿಯ ವ್ಯವಸ್ಥೆ ಮಾಡಿತ್ತು ಕೇಂದ್ರ ಸರಕಾರ. ಬಂಧಿಸುವಾಗಲೂ ಪಕ್ಷದ ಯುವ ಎಂಪಿಗಳಾದ ಹನ್ನನ್ ಮೊಲ್ಲಾ, ಸೈಫುದ್ದೀನ್ ಚೌಧರಿ, ನೇಪಾಳದೇವ ಭಟ್ಟಾಚಾರ್ಯ ಇವರನ್ನು ವ್ಯಾನಿನೊಳಕ್ಕೆ ಎತ್ತಿ ಎಸೆದು ಪೋಲಿಸರು ತಮ್ಮ ದ್ವೇಷವನ್ನು ತೀರಿಸಿಕೊಳ್ಳಲು ಪ್ರಯತ್ನಿಸಿದರು. ಬಂಧನಕ್ಕೊಳಗಾದವರಲ್ಲಿ ಬಸುದೇವ್ ಆಚಾರ್ಯ, ರೂಪಸ್ ಇವರೆಲ್ಲಾ ಸೇರಿದ್ದಾರೆ

ಬರಗಾಲ ಮತ್ತು ಪರಿಹಾರ

ಬರಗಾಲ ಪೀಡಿತ ಪ್ರದೇಶ				ಪರಿಹಾರ	
ವರ್ಷ	ಜಿಲ್ಲೆ	ತಾಲ್ಲೂಕು	ಗ್ರಾಮ	ಪರಿಹಾರ ವೆಚ್ಚ	ಕೇಂದ್ರದ ಪಾಲ
82-83	16	118	14570	29.30	10.0
83-84	16	118	14570	71.05	—
84-85	16	133	15052	152.05	29.73
85-86	16	146	19644	133.92	53.31

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V. Temple Street, Sultanpet, Bangalore-560053 Editorial and managerial office, L-56, K. V. TempleStreet, Sultanpet, B-53Phone : 75331
Editor P. Ramachandra Rao Managing Editor : N.K. Upadhyaya